ಶ್ರೀ ಪಿ.ಜಿ.ಆರ್. ಸಿಂಧ್ಯ:- ಬಹಳ ಮುಖ್ಯವಾಗಿ, ತಾವು ರಾಜ್ಯದ ಹಣಕಾಸಿನ ಮಂತ್ರಿಗಳಾಗಿರತಕ್ಕಂಥವರು. ನಾನು ಗುತ್ತಿಗೆದಾರರ ಪರವಾಗಿ ವಾದ ಮಾಡುತ್ತಾ ಇಲ್ಲ. ತಾವು ತಪ್ಪುದಾರಿಗೆ ಎಳೆಯುವುದಕ್ಕೆ ಪ್ರಯತ್ನ ಮಾಡುತ್ತೀರಿ. ನಾನು ಇಲ್ಲೇನೋ ಗುತ್ತಿಗೆದಾರರ ಪರವಾಗಿ ಪ್ಲೀಡ್ ಮಾಡುತ್ತಿದ್ದೇನೆಂದು ಭಾವನೆ ಬರುತ್ತಿದೆ. ಇಲ್ಲಿ ನಾವಾಗಲೀ ಅಥವಾ ವಿರೋಧ ಪಕ್ಷದ ನಾಯಕರಾಗಲೀ ಆ ಕೆಲಸ ಮಾಡುತ್ತಾ ಇಲ್ಲ. ತಾವು ತಪ್ಪು ದಾರಿಗೆ ಎಳೆಯುವುದಕ್ಕೆ ಪ್ರಯತ್ನ ಮಾಡಬೇಡಿ. Our concern is, we want to know from the Hon'ble Chief Minister - and it is our right to know........

ಅಧ್ಯಕ್ಷರು:- ಉತ್ತರವನ್ನು ಹೇಳುತ್ತೇನೆಂದು ಹೇಳುತ್ತಿದ್ದಾರಲ್ಲಾ. Why do you presume it ?

Is:- I am not Presuming.

Sri P.G. Sindhya:- What I am requesting the Hon'ble Chair is this. ಟ್ರಜರಿ ಬ್ಯಾನ್ ಆಗಿದೆ. ಅಭಿವೃದ್ಧಿ ಕೆಲಸಗಳೆಲ್ಲಾ ಸ್ಟಾಪ್ ಆಗಿದೆ. ಅದಕ್ಕೋಸ್ಕರ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ:- ಯಾವುದೂ ಸ್ಟಾಪ್ ಆಗಿಲ್ಲ, ಯಾವುದೂ ಬ್ಯಾನ್ ಆಗಿಲ್ಲ. ಇವುಗಳೆಲ್ಲವುಗಳಿಗೂ ಕೂಲಂಕುಷವಾಗಿ ಉತ್ತರ ಕೊಡುತ್ತೇನೆ. ಸ್ಟೇಟ್‌ಮೆಂಟ್ ಮಾಡುತ್ತೇನೆ.

ಅಧ್ಯಕ್ಷರು:- ಈಗ ಸದನವನ್ನು ಮಧ್ಯಾಹ್ನ 3-00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 1 ಗಂಟೆ 32 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 3-0 ಗಂಟೆಗೆ ಸೇರಲು ನಿಶ್ಚಯಿಸಿತು.

ಸದನವು ಮಧ್ಯಾಹ್ನ 3 ಗಂಟೆ 10 ನಿಮಿಷಕ್ಕೆ ಪುನರಾರಂಭಗೊಂಡಿತು)

ಸನ್ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು ಅಧ್ಯಕ್ಷ ಪೀಠದಲ್ಲಿದ್ದರು)

(4) ಮಂತ್ರಿಗಳ ಹೇಳಿಕೆ

(ಅ) ರಾಜ್ಯದಲ್ಲಿ ಬರಪರಿಹಾರದ ಬಗ್ಗೆ ಮಾನ್ಯ ಕೃಷಿ ಸಚಿವರಿಂದ ಉತ್ತರ

ಶ್ರೀ ವಿ.ಎಸ್ ಕೌಜಲಗಿ (ಕೃಷಿ ಸಚಿವರು):- ಮಾನ್ಯ ಅಧ್ಯಕ್ಷರೇ, ನಾನು ಕೃಷಿಗೆ ಸಂಬಂಧಿಸಿದಂತೆ ಉತ್ತರ ಕೊಡುತ್ತೇನೆ. ಕಳೆದೆರಡು ದಿವಸಗಳಿಂದ ನಿಯಮ 69ರ ಮೇರೆಗೆ ಶ್ರೀ ಜಗದೀಶ್ ಶೆಟ್ಟರ್, ಶ್ರೀ ಗುಂಡಪ್ಪ ವಕೀಲ್ ಶ್ರೀ ಬೈರೇಗೌಡರು, ಶ್ರೀ ಜಯಪ್ರಕಾಶ್ ಹೆಗಡೆ ಮತ್ತು ಇನ್ನೂ ವಿರೋಧಪಕ್ಷದ ನಾಯಕರು ಮುಂಗಾರು ಮಳೆಯ ಅಭಾವದಿಂದಾಗಿ ಉಂಟಾಗಿರುವ ಬರಗಾಲ ಪರಿಸ್ಥಿತಿ ಬಗ್ಗೆ ಚರ್ಚೆ ನಡೆಸಿದರು. ಇದರ ಬಗ್ಗೆ ನಾನು ಹೇಳುತ್ತೇನೆ. ಈ ದೇಶದಲ್ಲಿ ನಮ್ಮ ಆರ್ಥಿಕ ಪರಿಸ್ಥಿತಿ ಮಳೆಯನ್ನೆ ಅವಲಂಬಿಸಿದೆ. ನಾವು ವರುಣನ ದಾರಿಯನ್ನು ಕಾಯುತ್ತಾ ಕಾಯುತ್ತಾ, ಪ್ರತಿಸಲ ಮಳೆ ಕಡಿಮೆಯಾಗಿ ಅಭಾವವು ತಲೆದೋರಿ ಕುಡಿಯುವ ನೀರು ಒದಗಿಸಲು ಮತ್ತು ಬೆಳೆಹಾನಿ ತಡೆಯುವ ಬಗ್ಗೆ ನಾವು ಪ್ರಯತ್ನಿಸುತ್ತಿದ್ದೇವೆ. ಆದರೆ ಈ ದೇಶದಲ್ಲಿ ನಾವು

ಚಿಂತನೆ ಮಾಡತಕ್ಕಂಥದ್ದು ಬಹು ಮಹತ್ವದ್ದು. ಒಂದು ವೇಳೆ ಮಳೆ ಕಡಿಮೆಯಾದರೆ ಪರ್ಯಾಯ ಕ್ರಮವಾಗಿ ನಾವೇನು ಮಾಡಬೇಕು ಎಂಬ ಬಗ್ಗೆ ದಿಲ್ಲಿಯಿಂದ ಇಲ್ಲಿಯವರೆಗೆ ಕಾರ್ಯಕ್ರಮ ಮಾಡುತ್ತಿದ್ದೇವೆ. ಹಿಂದೆ ಶ್ರೀ ಕೆ.ಎಲ್. ರಾವ್ ಅವರು ಒಂದು ಸೂಚನೆ ನೀಡಿದ್ದರು; ಗಂಗೆಯನ್ನು ಗೋದಾವರಿ ನದಿಗೆ ಕೂಡಿಸುವುದರಿಂದ ನೀರಿನ ಅಭಾವದ ತೊಂದರೆ ಕಡಿಮೆಯಾಗುತ್ತದೆ. ಏಕೆಂದರೆ ಬೇಸಿಗೆ ಕಾಲದಲ್ಲಿ ಹಿಮ ಕರಗಿ ಗಂಗೆಗೆ ನೀರು ಬರುತ್ತದೆ. ಮಳೆಗಾಲದಲ್ಲಿ ಉಕ್ಕಿ ಹರಿಯುವ ನದಿ ನೀರನ್ನು ಸಮುದ್ರಕ್ಕೆ ಬಿಡುವ ಬದಲಿಗೆ ಬೇರೆ ಬೇರೆ ಪ್ರಾಂತ್ಯಗಳಲ್ಲಿ ನೀರನ್ನು ಕೃಷಿಗೆ, ಕುಡಿಯಲಿಕ್ಕೆ ಮತ್ತು ಪಶು ಸಾಕಾಣಿಕೆ - ಇವುಗಳಿಗೆ ಉಪಯೋಗ ಮಾಡುವಂತಹ ಮಹತ್ವದ ಯೋಜನೆ - ಅದಕ್ಕೆ 50,000 ಕೋಟಿ ರೂಪಾಯಿಗಳಾಗಲಿ - ಇದನ್ನು ನಮ್ಮೆಲ್ಲಾ ಪಂಚವಾರ್ಷಿಕ ಯೋಜನೆಗಳಲ್ಲಿ ದೂರ ಮಾಡುತ್ತಾ ಬಂದೆವು. ಇವತ್ತು ನಾವು ಎದುರಿಸಲಾರದ ಪರಿಸ್ಥಿತಿ ಏನೆಂದರೆ ಪ್ರತಿವರ್ಷ ಬರಗಾಲ, ಮಳೆ ಹೋಯಿತು. ಅದಕ್ಕಾಗಿ ಬರಗಾಲ ಕಾಮಗಾರಿ ಮಾಡಬೇಕು. ರೈತ ಕಾರ್ಮಿಕರಿಗೆ ಕೆಲಸ ಕೊಡಬೇಕೆಂಬ ಬೇಡಿಕೆ - ಈಗಲಾಗರೂ ನಾವು ಇದಕ್ಕೆ ಪ್ರಯತ್ನ ಮಾಡಬೇಕು. ಎಂದು ನಾನು ಮಾನ್ಯ ಜಗದೀಶ್ ಶೆಟ್ಟರ್ ಅವರನ್ನು ಕೇಳುತ್ತೇನೆ. ಏನಪ್ಪ, ಈ ವಿಷಯದ ಬಗ್ಗೆ ತಾವು ಪ್ರಧಾನಮಂತ್ರಿಗಳ ಜೊತೆ ಚರ್ಚೆ ಮಾಡಬೇಕು. ಕೇವಲ ಕರ್ನಾಟಕವೊಂದೇ ಅಲ್ಲ, ಮಧ್ಯ ಬರುವಂತಹ ಎಲ್ಲಾ ಪ್ರಾಂತ್ಯಗಳಿಗೆ ನೀರಿನ ವ್ಯವಸ್ಥೆಯಾಗುತ್ತದೆ. ಅದಕ್ಕೆ ಎಷ್ಟಾದರೂ ಖರ್ಚಾಗಲಿ. ಇದರಿಂದ ರೈತಾಪಿ ಜನರಿಗೆ ನೀರಿನ ವ್ಯವಸ್ಥೆಯಾಗುವಂತಹ ಆಯಾ ಪ್ರಾಂತ್ಯಗಳಲ್ಲಿ ಎಷ್ಟು? ಎಲ್ಲಿ ಕೆನಾಲ್ ಹಾಕಬೇಕು? ಹೇಗೆ ಮಾಡಬೇಕು? ಎಲ್ಲೆಲ್ಲಿ ಗುಂಡಿಗಳಿವೆ ಅವುಗಳಲ್ಲಿ ನೀರನ್ನು ತುಂಬಿಡಬೇಕು - ಈಗ ಯಾವುದೋ ಒಂದು ಕಾಲುವೆ ಬಂತು ಎಂದು ಇಟ್ಟುಕೊಳ್ಳಿ - ಅದರ ಪಕ್ಕದಲ್ಲಿರುವ ಗುಂಡಿಗಳಲ್ಲಿ ನೀರು ತುಂಬಿದರೆ, ನೀರು ಪರ್ಕೊಲೇಟಾಗಿ ಅಲ್ಲಿರುವ ಬಾವಿಗಳಿಗೆ ನೀರಿನ ವ್ಯವಸ್ಥೆಯಾಗುತ್ತದೆ. ಈ ಒಂದು ಕೆಲಸವನ್ನು ದೀರ್ಘವಾಗಿ ನಾವು ಚಿಂತಿಸಿ ಕೆಲಸವನ್ನು ಪ್ರಾರಂಭ ಮಾಡಿಸಬೇಕೆಂದು ಸದನದ ಎಲ್ಲಾ ಸದಸ್ಯರಿಗೂ ನಾನು ಕೇಳಿಕೊಳ್ಳುತ್ತೇನೆ. ನಾನೂ 25-30 ವರ್ಷಗಳಿಂದ ನೋಡುತ್ತಿದ್ದೇನೆ. ಬರಗಾಲ-ಕಾಮಗಾರಿ, ಅದನ್ನೇ ಮಾಡುವುದು, ಮತ್ತೆ ಮುಂದಿನ ವರ್ಷವೂ ಅದನ್ನೇ ಮಾಡುವುದು. ನಿರಂತರವಾಗಿ ಹೀಗೆ ಮಾಡುವುದಕ್ಕಿಂತ ಖಾಯಂ ಆಗಿ ಈ ಒಂದು ವ್ಯವಸ್ಥೆಯನ್ನು ನಾವು ಮಾರ್ಪಾಡು ಮಾಡಬೇಕು. ಇನ್ನು ನಮ್ಮ ದೇಶದಲ್ಲಿ ಅಥವಾ ನಮ್ಮ ಪ್ರಾಂತ್ಯದಲ್ಲಿ ಮಲೆನಾಡಿನಿಂದ ಬಯಲು ಸೀಮೆಯವರೆಗೆ ಮಳೆಯ ಪ್ರಮಾಣ ಬೇರೆ ಬೇರೆ ಹಂತದಲ್ಲಿದೆ. ಮಲೆನಾಡಿನಲ್ಲಿ ಯಾವ ಬೆಳೆಯನ್ನು ಬೆಳಯಬೇಕು? ಬಯಲುಸೀಮೆಯವರು ಯಾವ ಬೆಳೆಯನ್ನು ಬೆಳಯಬೇಕು ಎನ್ನುವುದನ್ನು ನಮ್ಮ ರೈತಾಪಿ ಜನರಿಗೆ ನಾವು ತಿಳಿಸಿಕೊಡುತಕ್ಕಂಥ ಕಾರ್ಯಕ್ರಮ ಬಹಳ ಮಹತ್ವದ್ದು ಇದೆ. ನಾವು ಪರಂಪರೆಯಾಗಿ ಬೆಳೆಯತಕ್ಕಂಥ ಬೆಳೆಗಳನ್ನು ಈ ಮಳೆ ಬಂದಾಗ ಇದನ್ನೇ ಬಿತ್ತಬೇಕು. ಇದೇ ನಮ್ಮ ಬೆಳೆ ಎಂದು ಹೇಳುವುದನ್ನು ನಾವು ಸ್ವಲ್ಪ ಬಡಾವಣೆ ಮಾಡಿಕೊಳ್ಳಬೇಕು. ನಾವು ಬೆಳೆದಂಥ ಬೆಳೆಗೆ ಯೋಗ್ಯವಾದ ಬೆಲೆ ಇವತ್ತು ಸಿಗುವುದಿಲ್ಲ. ನಾವು ಸರ್ಕಾರದಿಂದ ಅವರಿಗೆ ಗೊಬ್ಬರ, ಬೀಜವನ್ನು ಕೊಡಬಹುದು. ಕಷ್ಟಪಟ್ಟು ದುಡಿದಂಥ ರೈತರಿಗೆ ಒಂದು ವರ್ಷದ ಮಟ್ಟಿಗೆ ತನ್ನ ಜೀವನವನ್ನು ನಡೆಸುವುದಕ್ಕೆ ಯೋಗ್ಯವಾದ ಬೆಲೆ ಸಿಗುವುದಿಲ್ಲ. ಅದರ ಬಗ್ಗೆ ನಾವು ಚಿಂತನೆ ಮಾಡಬೇಕಾಗಿದೆ. ಏನು? ಕೃಷಿ ಆಧಾರಿತ ಔದ್ಯೋಗೀಕರಣ ಈ ದೇಶದಲ್ಲಿ ಆಗಲಿಕ್ಕೇ ಬೇಕು. ಕೃಷಿ ಆಧಾರಿತ ಔದ್ಯೋಗೀಕರಣವಾದಾಗಲೇ ಇವತ್ತು ರೈತರಿಗೆ ಯೋಗ್ಯವಾದ

ಬೆಲೆ ಸಿಗುತ್ತದೆ. ಇಲ್ಲದಿದ್ದರೆ ಒಂದು ಸಲ ಟೊಮೆಟೊ ಬೆಲೆ ಕಿಲೋಗೆ ಎರಡು ರೂಪಾಯಿ ಆಗುತ್ತದೆ. ಮತ್ತೊಂದು ಸಲ 20 ರೂ. ಕಿಲೋ ಆಗುತ್ತದೆ. ಇದು ಆಗಬಾರದು. ಅವರಿಗೆ ನಿರಂತರವಾಗಿ ಕನಿಷ್ಟ ಬೆಲೆ ಸಿಗುವಂಥ ಔದ್ಯೋಗೀಕರಣವನ್ನು ನಮ್ಮಲ್ಲಿ ಮಾಡಬೇಕು. ಉದಾಹರಣೆಗೆ ನಾನು ಹೇಳುತ್ತೇನೆ. ಗೋಕಾಕ್‌ನಲ್ಲಿ ನಾವು ಗೋವಿನಜೋಳದಿಂದ ಸ್ಟಾರ್ಚ್ ಮ್ಯಾನ್ಯುಫ್ಯಾಕ್ಚರಿಂಗ್ ಯೂನಿಟ್ ಹಾಕಿದ್ದೇವೆ. ಅಲ್ಲಿ ರೈತರು ಬೆಳೆಯುವ ಗೋವಿನ ಜೋಳ ಏನು ಇತ್ತು. ಅದು ಗುಜರಾತ್ ಮತ್ತು ಬೇರೆ ಬೇರೆ ಕಡೆಗಳಿಗೆ ಹೋಗುತ್ತಿತ್ತು. ಈಗ ಅದೇ ಗೋವಿನ ಜೋಳವನ್ನು ನಾವು ಗೋಕಾಕ್‌ನಲ್ಲಿ ಸ್ಟಾರ್ಚ್, ಡೆಕ್ಸ್‌ಟ್ರೋಸ್ ಮಾಡುವುದಕ್ಕೆ ಉಪಯೋಗಿಸುತ್ತಿದ್ದೇವೆ. ಅದಕ್ಕೆ ವಿದೇಶಿ ವಿನಿಮಯ ಸಿಗುತ್ತದೆ. ಇದರಿಂದ ಏನಾಗುತ್ತದೆಂದರೆ, ರೈತರಿಗೆ ಒಂದು ಆತ್ಮವಿಶ್ವಾಸ ಸಿಗುತ್ತದೆ. ಕ್ವಿಂಟಾಲ್‌ಗೆ 400-500 ರೂಪಾಯಿಗಳಂತೆ ನಾವು ಬೆಳೆದಂಥ ಗೋವಿನ ಜೋಳ ಹೋಗುತ್ತದೆ ಎನ್ನುವ ಒಂದು ಆತ್ಮವಿಶ್ವಾಸ ಅವರಿಗೆ ಬರುತ್ತದೆ. ಅದೇ ರೀತಿ ರೈತ ಬೆಳೆದಂಥ ಕಬ್ಬಿಗೂ ಯೋಗ್ಯವಾದ ಬೆಲೆ ಸಿಗುವಂತಾಗಬೇಕು. ಹೀಗೆ ನಾವು ಕೃಷಿ ಆಧಾರಿತ ಔದ್ಯೋಗೀಕರಣವನ್ನು ಈ ದೇಶದಲ್ಲಿ ಮಾಡಿದರೆ ರೈತರಿಗೆ ಯೋಗ್ಯವಾದ ಬೆಲೆ ಸಿಗಬಹುದು. ಅವನೂ ಬದುಕಬಹುದು. ನಮ್ಮ ಚರ್ಚೆ ಏನು ಇದೆ ಮತ್ತು ತಾವೇನು ಟೀಕೆಟಿಪ್ಪಣಿಗಳನ್ನು ಕೊಟ್ಟಿದ್ದೀರಿ, ಇದನ್ನು ನಾನು ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ. ಅದರ ಜೊತೆಗೆ ಇಂಥ ರಚನಾತ್ಮಕ ಸಲಹೆಗಳೇನಾದರೂ ಇದ್ದರೆ ನನಗೆ ಇನ್ನೂ ಸಂತೋಷವಾಗುತ್ತದೆ. ಹೀಗೆ ಕೃಷಿ ಆಧಾರಿತ ಔದ್ಯೋಗೀಕರಣ ಮಳೆಯ ವ್ಯವಸ್ಥೆ ಬಗ್ಗೆ ಈಗಾಗಲೇ ನಾವು ನಮ್ಮ ಕೃಷಿ ಇಲಾಖೆಯಿಂದ ಜಲಾಯನಯ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಇದರ ಮೂಲ ಉದ್ದೇಶ ಜಲಾನಯನ ಪ್ರದೇಶಾಭಿವೃದ್ಧಿಯದ್ದು, ಏನು ಮಳೆ ನೀರು ಬೀಳುತ್ತದೆ. ಅದು ಹರಿದು ಹಳ್ಳ ಕೊಳಕ್ಕೆ ಹೋಗುವ ಬದಲಾಗಿ ಅಲ್ಲಲ್ಲಿ ನಾವು ಬ್ಯಾರೇಜುಗಳನ್ನು ಕಟ್ಟಿ ನೀರು ಭೂಮಿಯಲ್ಲಿ ಇಂಗಿ (ಅಂತರ್ಜಲ ಅಭಿವೃದ್ಧಿಯಾಗಬೇಕು. ಭೂಮಿ ಸಮೃದ್ಧಿಯಾಗಿ ಇರಬೇಕು ಎನ್ನುವ ದೃಷ್ಟಿಯಿಂದ ಈ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ. ಇನ್ನೂ ಹೇಳಬೇಕೆಂದರೆ, ನಮ್ಮ ಇಲಾಖೆ ಈಗಾಗಲೇ ಈ ಬಗ್ಗೆ ಸ್ವಲ್ಪ ಅಧ್ಯಯನ ಮಾಡಿ, ಮಳೆ ಯಾವ ಯಾವ ಪ್ರದೇಶದಲ್ಲಿ ಕಡಿಮೆ ಬೀಳುತ್ತದೆ? ಇಲ್ಲಿ ಏನು ಬೆಳೆ ಬೆಳೆಯಬೇಕು? ಹೀಗೆ ನಮ್ಮ ರಾಜ್ಯದ ತುಂಬಾ ಹತ್ತು ವಲಯಗಳನ್ನು ಮಾಡಿ, ಇಲ್ಲಿ ಎರಡು ಇಂಚು, ಐದು ಇಂಚು, ಹತ್ತು ಇಂಚು ಮಳೆ ಏನು ಬೀಳುತ್ತದೆ. ಅಲ್ಲಿ ಏನೇನು ಬೆಳೆಗಳನ್ನು ಬೆಳೆಯುವುದಕ್ಕೆ ಸಾಧ್ಯ ಇದೆ ಎನ್ನುವ ಪರ್ಯಾಯ ಬೆಳೆ ಯೋಜನೆಯನ್ನು ತಯಾರು ಮಾಡಿದ್ದೇವೆ. ಸರ್ಕಾರ ಏನು ಮಾಡಿದೆ ಎಂದು ತಾವೆಲ್ಲಾ ಕೇಳಿದಿರಿ. ಅಡ್ಡಿ ಇಲ್ಲ. ಯಾವಾಗ ಮಳೆ ಸಂಪೂರ್ಣವಾಗಿ ಆಗಿ ನಮಗೆ ಬೆಳೆಗಳನ್ನು ಬೆಳೆದುಕೊಳ್ಳುವುದಕ್ಕಾಗುತ್ತಿತ್ತು. ಅಂಥ ಸಂದರ್ಭದಲ್ಲಿ ಬರಗಾಲ ಬಂದರೆ ಕಡಿಮೆ ಮಳೆ ಆದಂಥ ಪ್ರದೇಶದಲ್ಲಿ ಭೂಮಿಯ ಗುಣಮಟ್ಟವನ್ನು ಪರಿಶೀಲನೆ ಮಾಡಿ ನಾವು ಪರ್ಯಾಯ ಬೆಳೆ ಯೋಜನೆಯನ್ನು ತಯಾರು ಮಾಡಿದ್ದೇವೆ. ಅದನ್ನು ಎಲ್ಲಾ ಮಾನ್ಯ ಸದಸ್ಯರಿಗೂ ಕೊಡುತ್ತೇನೆ. ನಮ್ಮ ರಾಜ್ಯದಲ್ಲಿರುವ 175 ತಾಲ್ಲೂಕುಗಳ ಪೈಕಿ ನನಗೆ ಸಿಕ್ಕಂಥ ಮಾಹಿತಿ ಪ್ರಕಾರ 120 ತಾಲ್ಲೂಕುಗಳಲ್ಲಿ ಕಡಿಮೆ ಮಳೆಯಾಗಿದೆ. ಸುಮಾರು 20 ಲಕ್ಷ, ಹೆಕ್ಟೇರ್‌ನಲ್ಲಿ ಬಿತ್ತನೆ ಆಗಿದೆ. ಇದಕ್ಕನುಗುಣವಾಗಿ ನಾನು ಹೇಳಿದ ಹಾಗೆ ಯೋಜನೆಯನ್ನು ತಯಾರು ಮಾಡಿದ್ದೇವೆ. ನಾವು ಆಶಾವಾದಿಗಳಾಗಿರಬೇಕು. ನಾವು ವರುಣನಲ್ಲಿ ಪ್ರಾರ್ಥನೆ ಮಾಡಿ ಆದಷ್ಟು ಬೇಗ ಮಳೆ ಆಗಲಿ

ಎನ್ನುವ ವಿಚಾರದಲ್ಲಿ ನಮಗೆ ತಿಳಿದ ಪ್ರಕಾರ ಸುಮಾರು 15ನೇ ತಾರೀಖು ಜುಲೈಯಲ್ಲಿ ಜಾಸ್ತಿ ಮಳೆ ಆಗುವ ಸಂಭವ ಇದೆ ಎಂದು ಹೇಳಿದ್ದಾರೆ. ಅದನ್ನು ಆಶಿಸೋಣ. ಇನ್ನು ಸದನದಲ್ಲಿ ತೀವ್ರವಾಗಿ ಚರ್ಚೆ ಮಾಡಿದಂಥ ವಿಚಾರ ಕೃಷಿ ವಿಮಾ ಯೋಜನೆ. ಮಾನ್ಯ ಸದಸ್ಯರುಗಳು ಬಹಳ ಕಳಕಳವನ್ನು ವ್ಯಕ್ತಪಡಿಸಿದ್ದಾರೆ. ಅದರ ಬಗ್ಗೆ ನಾನು ನಾಲ್ಕು ಮಾತುಗಳನ್ನು ಹೇಳುತ್ತೇನೆ. ಸುಮಾರು 6,11,027 ರೈತರು ಸಾಲ ಪಡೆದವರು. ಇದರಲ್ಲಿ ಒಟ್ಟು 8,00,088 ಲಕ್ಷ ಹೆಕ್ಟೇರ್‌ಗಳಲ್ಲಿ ಬೆಳೆದಂಥ ಬೆಳೆಗೆ ವಿಮಾ ಕಂತನ್ನು ಕಟ್ಟಿದ್ದಾರೆ. ಮಾನ್ಯ ಎಸ್.ಎಸ್. ಪಾಟೀಲರು, ನೀವು ಮೋಸ ಮಾಡುತ್ತಿದ್ದೀರಿ ಎಂದು ಹೇಳಿದರು. ಅವರ ವಿಚಾರವನ್ನು ಅವರು ಹೇಳಿದರು. ಅದರ ಜೊತೆಗೆ ಇನ್ನೂ ಕೆಲವರು ರೈತರಿಗೆ ದುಡ್ಡು ಮುಟ್ಟಿಲ್ಲ ಎಂದು ಅಥವಾ ಸರಿಯಾಗಿ ವಿಮಾ ಯೋಜನೆಯನ್ನು ಜಾರಿಗೊಳಿಸುತ್ತಿಲ್ಲ ಎನ್ನುವ ತಮ್ಮ ಒಂದು ಕಳವಳವನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಈಗ ನಮ್ಮ ಅಂದಾಜು ಕೃಷಿ ವಿಮೆ ದುಡ್ಡು ಸುಮಾರು 132.93 ಕೋಟಿ ರೂಪಾಯಿಗಳನ್ನು ನಾವು ಕೊಡಬೇಕಾಗಿದೆ. ಈ ಹಣವನ್ನು ಸುಮಾರು 54.99 ಅಂದರೆ 55 ಕೋಟಿ ರೂಪಾಯಿಗಳನ್ನು ಇನ್ನೂ ಬಾಕಿ ಕೊಡಬೇಕಾಗಿದೆ. ಈ ಹಣವನ್ನು ನಾವು ಜನರಲ್ ಇನ್‌ಸೂರೆನ್ಸ್ ಕಂಪನಿಯವರಿಗೆ ಸಂದಾಯ ಮಾಡಿದ್ದೇವೆ. ಜನರಲ್ ಇನ್‌ಷ್ಯೂರೆನ್ಸ್ ಕಂಪನಿಯಿಂದ ಆಯಾ ಜಿಲ್ಲೆಯ ಬ್ಯಾಂಕುಗಳಿಗೆ ಜಿಲ್ಲೆಯ ಬ್ಯಾಂಕ್‌ನಿಂದ ಕ್ರೆಡಿಟ್ ಸೊಸೈಟಿಯವರಿಗೆ ಹೋಗುವುದಕ್ಕೆ ಸ್ವಲ್ಪ ವಿಳಂಬವಾಗುತ್ತದೆ. ಇದನ್ನು ನಾನು ಒಪ್ಪುತ್ತೇನೆ. ಜನರಲ್ ಇನ್‌ಷ್ಯೂರೆನ್ಸ್ ಕಂಪನಿಯಲ್ಲಿ ಚೆಕ್ ಎನ್‌ಕ್ಯಾಷ್ ಆಗಬೇಕಾದರೆ ಸರ್ಕಾರದಿಂದ ನಾವು ಕೊಟ್ಟಂಥ ಚೆಕ್ ಅಲ್ಲಿಗೆ ಹೋಗಿ ಅದು ಎನ್‌ಕ್ಯಾಷ್ ಆಗಿ ಪುನಃ ಅದು ಜಿಲ್ಲಾ ಮಟ್ಟದಲ್ಲಿ ಆಮೇಲೆ ತಾಲ್ಲೂಕು ಮಟ್ಟದಲ್ಲಿ ಹೋಗುವಲ್ಲಿಗೆ ಸ್ವಲ್ಪ ವಿಳಂಬವಾಗಿದೆ. ಈ ವಿಳಂಬವನ್ನು ನಾನು ಆದಷ್ಟು ತೀವ್ರದಲ್ಲೇ ಸರಿಪಡಿಸಬೇಕೆಂದು ಹೇಳಿ ಪ್ರಯತ್ನ ಮಾಡುತ್ತಿದ್ದೇನೆ. ಇದೇನು 55 ಕೋಟಿ ರೂಪಾಯಿಗಳು ಬಾಕಿ ಇದೆ. ಇದನ್ನು ನಾನು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಈ ತಿಂಗಳ ಕಡೆಯಲ್ಲಿ ಈ ಸಂಪೂರ್ಣವಾದ ದುಡ್ಡನ್ನು ರೈತರಿಗೆ ಮುಟ್ಟಿಸುವ ವ್ಯವಸ್ಥೆ ಮಾಡಿದರೆ ನಾವು ಕೊಡತಕ್ಕ 132 ಕೋಟಿ ರೂಪಾಯಿಗಳು ಎಲ್ಲಾ ಸಂದಾಯವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್:- ಆ ಅಮೌಂಟನ್ನು ಯಾವಾಗ ರಿಲೀಸ್ ಮಾಡಿದ್ದೀರಿ ಎಂಬುದು ಹೇಳಿ. 55 ಕೋಟಿ ರೂಪಾಯಿಗಳಲ್ಲಿ ಎಷ್ಟು ಅಮೌಂಟನ್ನು ರಿಲೀಸ್ ಮಾಡಿದ್ದೀರಿ?

Sri V.S. Koujalagi:- Claim settlement on 30.6.2002 is Rs. 20.28 crores claim settlement on 8.7.2002 is Rs. 57.66 crores Balance to be settled on 8.7.2002 is about Rs. 55 crore.

ಇನ್ನೇನು ಬ್ಯಾಲೆನ್ಸ್ ಕೊಡುವುದು ಇದೆ. ಅದನ್ನು ಈ ತಿಂಗಳೊಳಗಾಗಿ ರಿಲೀಸ್ ಮಾಡಿ ಕೊಡುತ್ತೇನೆ. ಏಕೆಂದರೆ ಇನ್ನು ಕೆಲವು ಕಡೆಗಳಲ್ಲಿ ಏನಾಗಿದೆ ಎಂದರೆ ರೈತರುಗಳು ಎರಡೆರಡು ಸಾರಿ ಕಂತು ತುಂಬಿದ್ದು ಅದೂ ಕೂಡ ಕೆಲವು ಸೆಟ್ಲ್‌ಮೆಂಟ್ಸ್ ಮಾಡಬೇಕಾಗಿದೆ. ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡು, ಆ ಜಿಲ್ಲಾಧಿಕಾರಿಗಳ ವರದಿಯ ಆಧಾರದ ಮೇಲೆ ನಾವು ಸೆಟಲ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇನ್ನು ಕೆಲವು ಮಾನ್ಯ ಸದಸ್ಯರುಗಳು ಹೇಳಿದರು, ನಿಮ್ಮ ರೈತ ಸಂಪರ್ಕ ಕೇಂದ್ರಗಳಲ್ಲಿ ಸ್ವಲ್ಪ ಸುಧಾರಣೆ ಆಗಬೇಕು ಮತ್ತು ತಾವು ಕಟ್

ಆಫ್ ಡೇಟ್ ಬಗ್ಗೆ ಗ್ರಾಮ ಪಂಚಾಯಿತಿಯನ್ನು ಯೂನಿಟ್ ಆಗಿ ಮಾಡಬೇಕು ಎಂದು ನಾವೀಗ ಹೋಬಳಿ ಯೂನಿಟ್‌ನಲ್ಲಿ ಮಾಡುತ್ತಿದ್ದೇವೆ. ಅದರ ಬಗ್ಗೆ ನಾವು ಕೇಂದ್ರ ಸರ್ಕಾರಕ್ಕೆ ಸಂಪರ್ಕ ಮಾಡಿ ಅದನ್ನು ಸುವ್ಯವಸ್ಥೆ ಮಾಡುವ ದೃಷ್ಟಿಯಲ್ಲಿದ್ದೇವೆ. ಆದರೆ ನಮ್ಮ ಇಲಾಖೆಯಲ್ಲಿ ಇರತಕ್ಕ ರೈತ ಸಂಪರ್ಕ ಕೇಂದ್ರಗಳಲ್ಲಿ ಅಧಿಕಾರಿಗಳು ಏನು ಇದ್ದಾರೆ, ನಾನು ಇವತ್ತು ಅವರಿಗೆ ಆಜ್ಞೆ ಕೊಟ್ಟು ಹಳ್ಳಿಯಲ್ಲಿರತಕ್ಕ ರೈತರುಗಳ ಮನೆ ಮನೆಗೆ ಹೋಗಿ ಏನು ಸಮಸ್ಯೆ ಇದೆ, ತೊಂದರೆ ಇದೆ ಅದನ್ನು ನಿವಾರಿಸಲು ನಾವು ಏನೇನು ಪ್ರಯತ್ನಗಳನ್ನು ಮಾಡಬೇಕು ಎನ್ನುವುದು ತಿಳಿದುಕೊಂಡು ನಮಗೆ ವರದಿ ಕೊಟ್ಟರೆ ಇಲಾಖೆಯಿಂದ ಅವರಿಗೆ ವ್ಯವಸ್ಥೆ ಮಾಡಿ ಕೊಡುವುದಕ್ಕೆ ಸಾಧ್ಯ ಇದೆ. ಆ ದೃಷ್ಟಿಯಲ್ಲಿ ನಾವು ಕೆಲಸ ಮಾಡಲಿಕ್ಕೆ ನಮ್ಮ ಇಲಾಖೆ ಯೋಚನೆ ಮಾಡಿದೆ. ಅದರ ಬಗ್ಗೆ ಹೆಚ್ಚಿನ ಗಮನ ರೈತರ ಅಭಿವೃದ್ಧಿಗೆ ಕೊಡಬೇಕು. ಏಕೆಂದರೆ ನಾವೆಲ್ಲಾ ರೈತರು ದೇಶದ ಬೆನ್ನೆಲುಬು, ರೈತರ ಅಭಿವೃದ್ಧಿಗಾಗಿ ನಾವು ನೀವೂ ಶ್ರಮಿಸುವಂಥದವರು. ಈ ಸಮಸ್ಯೆ ಬಗ್ಗೆ ನನಗೆ ಅನ್ನಿಸುತ್ತದೆ. ಕೇವಲ ಸರ್ಕಾರಕ್ಕೇ ಅಲ್ಲ. ವಿರೋಧ ಪಕ್ಷದವರೂ ಸಹಿತ ಇದಕ್ಕೆ ಸಹಕಾರ ಕೊಟ್ಟು ಉತ್ತಮವಾದ ಸಲಹೆಗಳನ್ನು ಕೊಟ್ಟರೆ ಅದರಲ್ಲಿ ಯೋಗ್ಯವಾಗದ್ದನ್ನು ಪರಿಶೀಲನೆ ಮಾಡಿ ಕಾರ್ಯಗತ ಮಾಡುವುದರಲ್ಲಿ ನಾವೇನೂ ಹಿಂದೆ ಬೀಳುವುದಿಲ್ಲ. ಅಂತೂ ಇಂತೂ ಎಲ್ಲರ ಅಭಿಪ್ರಾಯ ಎಂದರೆ ರೈತರ ಅಬಿವೃದ್ಧಿ ಆಗಬೇಕು ಎಂದು. ಈ ಅಭಿವೃದ್ಧಿ ಆಗಬೇಕಾದರೆ ನಾವು ನೀವು ಎಲ್ಲರೂ ಕೂಡಿ ಕೆಲಸ ಮಾಡಬೇಕು. ತಾವು ರಚನಾತ್ಮಕವಾದಂತಹ ಸಲಹೆಗಳನ್ನು ಕೊಟ್ಟರೆ ನನಗೆ ಬಹಳ ಸಂತೋಷವಾಗುತ್ತದೆ. ಅದನ್ನು ನಾವು ಅಳವಡಿಸೋಣ. ಈಗ ನಮ್ಮ ಇಲಾಖೆಯಲ್ಲಿರತಕಕ್ಕ ಕಾರ್ಯಕ್ರಮಗಳನ್ನು ನಾನು ಇನ್ನೂ ಚುರುಕುಗೊಳಿಸುತ್ತೇನೆ. ಏಕೆರಂದರೆ ಈಗ ನಾನು ಕಳೆದ ನಾಲ್ಕು ದಿವಸಗಳಿಂದ ಮಂತ್ರಿಯಾಗಿದ್ದೇನೆ. ಅದನ್ನು ಪರಿಶೀಲನೆ ಮಾಡಿ ಯಾವ ದಿಸೆಯಲ್ಲಿ ಈ ಇಲಾಖೆ ಇನ್ನೂ ಚುರುಕಾಗಿ ಕೆಲಸ ಮಾಡಿ ರೈತರ ಅಭಿವೃದ್ಧಿಗಾಗಿ ಹೇಗೆ ಕೆಲಸ ಮಾಡಬೇಕು ಎನ್ನುವ ಬಗ್ಗೆ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ. ಏಕಪ್ಪ, ಎಂದರೆ ನಾವು ನೀವು ಎಲ್ಲರೂ ಸ್ವಲ್ಪ ಚಿಕ್ಕ ರೈತರು ಇರಬಹುದು. ಆದರೆ ರೈತಾಪಿ ಜನರ ತೊಂದರೆ ಬಗ್ಗೆ ನಮಗೆಲ್ಲರಿಗೂ ಕಲ್ಪನೆ ಇದೆ. ಇದನ್ನು ಮಾಡುವ ಸಲುವಾಗಿ ನಾವೆಲ್ಲಾ ಕೂಡಿ ದುಡಿಯೋಣ, ಪ್ರಯತ್ನ ಮಾಡೋಣ. ರೈತರ ಅಭಿವೃದ್ಧಿ ಕೆಲಸ ಮಾಡಿಸುವ ಸಲುವಾಗಿ ನಾನು ತಮ್ಮಲ್ಲಿ ಬಹಳ ಆತ್ಮೀಯತೆಯಿಂದ ಕೇಳಿಕೊಳ್ಳುತ್ತೇನೆಂದು ಹೇಳಿ ಈ ನಮ್ಮ ಇಲಾಖೆಯ ಬಗ್ಗೆ ನಾಲ್ಕು ಮಾತುಗಳನ್ನು ಹೇಳಿದ್ದೇನೆ. ಇನ್ನು ರಾಜ್ಯದ ಬರಾಗಲದ ಪರಿಸ್ಥಿತಿ ಸಲುವಾಗಿ ಮಾನ್ಯ ಕಂದಾಯ ಸಚಿವರು ಬಂದು ಸಂಪೂರ್ಣವಾದಂತಹ ಮಾಹಿತಿಯನ್ನು ಕೊಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಕ್ಲಾರಿಫಿಕೇಷನ್ ಕೇಳಬೇಕು. ಮಾನ್ಯ ರೆವಿನ್ಯೂ ಮಂತ್ರಿಗಳು ಬರಲಿ. ಇಲ್ಲಿಯವರೆಗೂ ಮಾನ್ಯ ಕೃಷಿ ಸಚಿವರಲ್ಲಿ ಕ್ಲಾರಿಫಿಕೇಷನ್ ಕೇಳುತ್ತೇನೆ. ಮಾನ್ಯ ರೆವಿನ್ಯೂ ಮಂತ್ರಿಗಳು ಬರುತ್ತಾರೋ ಇಲ್ಲವೋ?

ಅಧ್ಯಕ್ಷರು:- ರೆವಿನ್ಯೂ ಮಂತ್ರಿಗಳು ಬರುತ್ತಾರೆ. ಇಲ್ಲಿ ಪ್ರಶ್ನೆ ಏನಾಗಿತ್ತು ಎಂದರೆ ಮೇಲ್ಮನೆ ಮತ್ತು ಇಲ್ಲಿ ಎರಡೂ ಕಡೆಗೆ ಮೂರು ಗಂಟೆಗೆ ಉತ್ತರ ಎಂದು ಕಾರ್ಯಕ್ರಮ ಹಾಕಿಕೊಂಡಿದ್ದೆವು. ನಾನು ಮಾನ್ಯ ಸಭಾಪತಿಯವರ ಹತ್ತಿರ ಮಾತನಾಡಿ, ಮೊದಲು ಕಂದಾಯ ಮಂತ್ರಿಗಳು ಅಲ್ಲಿಲ್ಲಿ ಉತ್ತರ ಕೊಡಲಿ ಎಂದು ಹೇಳಿದೆ. ಮಾನ್ಯ ಕಂದಾಯ ಮಂತ್ರಿಗಳಾದ ಶ್ರೀ ಕಂಠಯ್ಯನವರು ಬರುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್:- ಇಲಾಖೆ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳಿಗೆ ಗೊತ್ತಿದೆಯೋ ಇಲ್ಲವೋ ಇಲ್ಲಿ ಮಾನ್ಯ ಕಂದಾಯ ರಾಜ್ಯ ಮಂತ್ರಿಗಳು ಇದ್ದಾರೆ.

ಅಧ್ಯಕ್ಷರು:- ಮಾನ್ಯ ಪಾಟೀಲ್ ಅವರೇ, ದಯಮಾಡಿ ಕುಳಿತುಕೊಳ್ಳಿ. ನಾನೂ ಮಾನ್ಯ ಸಭಾಪತಿಯವರೂ ಮಾತನಾಡಿದ್ದೇವೆ, ಅಲ್ಲಿ ಮೊದಲು ಕಂದಾಯ ಮಂತ್ರಿಗಳು ಉತ್ತರ ಕೊಡಲಿ ಮಾನ್ಯ ಕೌಜಲಗಿ ಅವರು ಇಲ್ಲಿ ಉತ್ತರ ಕೊಡುತ್ತಾರೆ. ಅಲ್ಲಿ ಕಂದಾಯ ಮಂತ್ರಿಗಳ ಉತ್ತರ ಮುಗಿದ ಮೇಲೆ ಅವರು ಇಲ್ಲಿಗೆ ಬರುತ್ತಾರೆ. ಇವರು ಅಲ್ಲಿಗೆ ಹೋಗುತ್ತಾರೆ ಎನ್ನುವ ರೀತಿಯಲ್ಲಿ ಮಾತನಾಡಿಕೊಂಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷಿ ಸಚಿವರು ಕೆಲವೊಂದು ವಿಷಯಗಳ ಬಗ್ಗೆ ಅವರೂ ಸೂಚನೆ ಕೊಟ್ಟರು. ಇವತ್ತು ಸರ್ಕಾರದಲ್ಲಿ ಇದ್ದು ಮಂತ್ರಿಗಳಾಗಿ ಕೆಲಸ ಮಾಡುವಂತಹವರು ನಮ್ಮ ರಾಜ್ಯದಲ್ಲಿರತಕ್ಕ ರೈತರಿಗೆ ಏನು ತೊಂದರೆ ಆಗಿದೆ. ಆ ತೊಂದರೆಗೆ ಏನಾದರೂ ಒಂದು ಪರಿಹಾರ ಕೊಡಬೇಕಾಗಿತ್ತು ಎನ್ನುವಂತಹದನ್ನು ನಾವು ಕಲ್ಪನೆ ಮಾಡಿಕೊಂಡಿದ್ದೆವು. ಆದರೆ ಮಾನ್ಯ ಸಚಿವರು ಹಲವಾರು ವಿಚಾರಗಳನ್ನು ಹೇಳಿ ಆ ಒಂದು ಮಾತಿನ ಧಾಟಿ ಏನು ಇತ್ತು ಎಂದರೆ ಎಲ್ಲಾ ಜವಾಬ್ದಾರಿಯನ್ನೂ ನಾವು ನಿಭಾಯಿಸಿಕೊಂಡಿದ್ದೇವೆ. ಇನ್ನೇನೂ ಉಳಿದಿಲ್ಲ ಎನ್ನುವ ರೀತಿಯಲ್ಲಿ ಇತ್ತು. ಅವರು ಮೊದಲನೇ ಸಜೆಷನ್ ಹೇಳಿದರು. ಕೇಂದ್ರ ಸರ್ಕಾರಕ್ಕೆ ಹೇಳಿ ಗಂಗೆ ಮತ್ತು ಗೋದಾವರಿ ನದಿಗಳನ್ನು ಜೋಡಣೆ ಮಾಡುವಂತಹದು. ಅದು ಬಹಳ ಒಳ್ಳೆಯ ವಿಚಾರ. 40-45 ವರ್ಷಗಳ ಕಾಲ ಕೇಂದ್ರದಲ್ಲಿ ಸರ್ಕಾರ ಮಾಡಿ ಅದರಲ್ಲಿ ಪ್ರಮುಖ ನಾಯಕರಾಗಿ ತಾವು ಈ ಹಿಂದೆಯೇ ಏಕೆ ಆ ಸೂಚನೆ ಕೊಡಲಿಲ್ಲ ಎಂಬುದು ನನಗೆ ಗೊತ್ತಾಗಲಿಲ್ಲ. ಆದರೆ ಆಗಲಿ ಈಗಲಾದರೂ ಒಂದು ಸ್ವಲ್ಪ ಜ್ಞಾನೋದಯ ಆಗಿದೆ. ಈಗಲಾದರೂ ನೀವು ಸಜೆಷನ್ ಮಾಡಿದಿರಿ. ನಾವು ಮಾನ್ಯ ಪ್ರಧಾನಮಂತ್ರಿಗಳನ್ನು ಭೇಟಿ ಆಗುತ್ತೇವೆ. ಆ ಸಂದರ್ಭದಲ್ಲಿ ತಾವೇನು ಒಳ್ಳೆಯ ಸೂಚನೆ ಕೊಟ್ಟಿದ್ದೀರಿ, ಈ ಬಗ್ಗೆ ನಮ್ಮ ಮನವಿಯನ್ನೂ ಅರ್ಪಣೆ ಮಾಡುತ್ತೇವೆ. ಏಕೆಂದರೆ ಮಾನ್ಯ ಪ್ರಧಾನಮಂತ್ರಿಗಳಾದಂತಹ ಶ್ರೀ ಅಟಲ್‌ಬಿಹಾರಿ ವಾಜಪೇಯಿ ಅವರು ಇಂತಹ ದಿಟ್ಟ ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದಾರೆ. ಈಗಾಗಲೇ 54 ಸಾವಿರ ಕೋಟಿಯಂತಹ ಚತುಷ್ಕೋನ ರಸ್ತೆಯ ನಿರ್ಮಾಣ ಯೋಜನೆ ಇದೆ, 54 ಸಾವಿರ ಕೋಟಿಯಂತಹ ಯೋಜನೆಯನ್ನು ಬಹುಶಃ ಯಾವ ಸರ್ಕಾರವೂ ಕೈಗೊಂಡಿರಲಿಲ್ಲ. ಅಂತಹ ಕೆಲಸವನ್ನು ಕೈಗೊಂಡು ಈಗಾಗಲೇ ಕಾಮಗಾರಿ ನಿರ್ಮಾಣ ಆಗುತ್ತಿದೆ. ಅಂತಹವನ್ನು ಕೈಗೊಂಡಿದ್ದಾರೆ. ಬಹುಶಃ ಇಂಥವು ಹಿಂದಿನ ಸರ್ಕಾರದಿಂದ ಯಾವುದೂ ಆಗಿಲ್ಲ. ಈ ವಿಚಾರವನ್ನೂ ಹೇಳುತ್ತೇನೆ. ಮನವಿಯನ್ನೂ ಕೊಡುತ್ತೇನೆ. ಅದರ ಬಗ್ಗೆ ನಾವೆಲ್ಲಾ ಚಿಂತನೆ ಮಾಡೋಣ. ನೀವು ಇವತ್ತು ಬೆಳೆ ವಿಮೆ ಬಗ್ಗೆ ಹೇಳಿದಿರಿ. ಮೊನ್ನೆ ಯಾವಾಗ ನಾವು ಒಂದು ಅಜ್ವರ್ನ್‌ಮೆಂಟ್ ಮೋಷನ್ ಕೊಟ್ಟೆವು ಅಲ್ಲಿಂದ ಇಲ್ಲಿಯವರೆಗೆ ನಾವು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇವೆ. ನಿಮ್ಮ ಸರ್ಕಾರ ಫೈನಾನ್‌ಷಿಯಲ್ ಪೊಜಿಷನ್ ಏನು ಇದೆ ಎಂಬುದು ನಮಗೆ ಗೊತ್ತಿಲ್ಲ. ಅದನ್ನು ಡಿಸ್‌ಕ್ಲೋಸ್ ಮಾಡಬೇಕಾಗುತ್ತದೆ. ಆದರೆ ಇವತ್ತು ರೈತರಿಗೆ ಕೊಡುವಂತಹ ಬೆಳೆ ವಿಮೆ ಹಣಕ್ಕೆ ಕೊರತೆ ಆಗಬಾರದು. ಬೇರೆ ಯಾವುದಕ್ಕೆ ಕೊರತೆ ಆಗಲಿ ಆದರೆ ಈ ಹಣಕ್ಕೆ ಕೊರತೆ ಆಗಬಾರದು ಎಂತಲೇ ನನ್ನ ಕಳಕಳಿ. ಇನ್ನೂ ನೀವು ಏಕೆ ಈ ತಿಂಗಳ ಅಂತ್ಯದವರೆಗೆ

ಅವಧಿಯನ್ನು ತೆಗೆದುಕೊಳ್ಳುತ್ತಿದ್ದೀರಿ? ಈ ಬ್ಯಾಲೆನ್ಸ್ ಅಮೌಂಟ್ ರಿಲೀಸ್ ಮಾಡುವುದಕ್ಕೆ ಏನು ತೊಂದರೆ ಆಗಿದೆ? ರಾಜ್ಯ ಸರ್ಕಾರದಲ್ಲಿ ಹಣ ಇಲ್ಲವಾ? ಈ ಹಣದ ವಿಚಾರದಲ್ಲಿ ಏನು ತೊಂದರೆ ಇದೆ ಎನ್ನುವುದನ್ನು ತಾವು ಹೇಳಿದರೆ ಒಳ್ಳೆಯದಾಗುತ್ತದೆ. ಇಲ್ಲದೇ ಇದ್ದರೆ ಈ ತಿಂಗಳ ಅಂತ್ಯದವರೆಗೆ ಎಂದು ಹೇಳಿ ಅವಧಿಯನ್ನೇನು ವಿಸ್ತರಣೆ ಮಾಡುತ್ತಿದ್ದೀರಿ, ಎರಡು ತಿಂಗಳ ಹಿಂದೆಯೇ ಬೆಳೆ ವಿಮೆ ಹಣವನ್ನು ಕೊಡಬೇಕಾಗಿತ್ತು. ಹಣ ಕೊಟ್ಟಿದ್ದರೆ ರೈತರು ಉದ್ಧಾರವಾಗುತ್ತಿದ್ದರು. ಈಗ ರೈತರು ಸಂಕಷ್ಟದಲ್ಲಿದ್ದಾರೆ. ಹಣ ಇಲ್ಲದೇ ಇದ್ದರೆ ಮತ್ತೆ ಮುಂದೆ ಹಾಕಿದರೆ ಕಷ್ಟ. ಬಹುಶಃ ಸದನ ನಡೆಯುವಂತಹ ಸಂದರ್ಭದಲ್ಲಿಯೇ ತಾವು ಈ ರೀತಿ ಅವಧಿಯನ್ನು ತೆಗೆದುಕೊಳ್ಳುತ್ತೀರಿ ಎಂದಾಗ ಬಹುಶಃ ಸದನ ಮುಗಿದಾದ ಮೇಲೆ ಆ ಪೇಮೆಂಟ್ ಆಗಲಿಕ್ಕಿಲ್ಲ. ಹೀಗಾದರೆ ರೈತರಿಗೆ ಬಹಳ ಕಷ್ಟ ಆಗುತ್ತದೆ. ಅದಕ್ಕಾಗಿ ಈ ಬೆಳೆ ವಿಮೆ ಹಣ ಬ್ಯಾಲೆನ್ಸ್ ಅಮೌಂಟ್ ಏನು ಕೊಡುವುದು ಇದೆ. ಅದನ್ನು ಕೊಡುವುದಕ್ಕೆ ತಡ ಏಕೆ ಮಾಡುತ್ತಿದ್ದೀರಿ? ಏಕೆಂದರೆ ನನಗೆ ಬಂದ ಮಾಹಿತಿ ಪ್ರಕಾರ ಈಗಾಗಲೇ ಕೊಟ್ಟು ಬಿಟ್ಟಿದ್ದಾರೆ. 8ನೇ ತಾರೀಖಿಗೆ ಎಲ್ಲಾ ಅಮೌಂಟ್ ರಿಲೀಸ್ ಆಗಿತ್ತು ಎನ್ನುವ ಮಾಹಿತಿ ನನಗೆ ಬಂದಿದೆ. ಅಥವಾ ರಿಲೀಸ್ ಆಗಿರುವ ಬಗ್ಗೆ ತಮಗೆ ಮಾಹಿತಿ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ ಅಥವಾ ರಿಲೀಸ್ ಆಗಿಲ್ಲ ಎಂದರೆ ದಯವಿಟ್ಟು ನಾಳೆ ನಾಡಿದ್ದು ಅಥವಾ ಒಂದೆರಡು ದಿವಸಗಳಲ್ಲಿ ರಿಲೀಸ್ ಮಾಡಿ. ನೀವು ತಿಂಗಳ ಅಂತ್ಯದವರೆಗೆ ಅವಧಿಯನ್ನು ತೆಗೆದುಕೊಳ್ಳುವುದಕ್ಕೆ ಹೋಗಬೇಡಿ. ಇದು ನಮ್ಮ ಮೊದಲನೆಯ ಬೇಡಿಕೆ ಇದೆ. ಮತ್ತೆ ಇನ್ನುಳಿದದ್ದು ಈ ಬಡ್ಡಿ ಮನ್ನಾ ವಿಚಾರವನ್ನು ನಾವು ಕೇಳಿದ್ದೇವೆ. ಮತ್ತು ಸಾಲದ ಅವಧಿಯ ವಿಸ್ತರಣೆ ವಿಚಾರ ಕೇಳಿದ್ದೇವೆ. ಅದಕ್ಕೆ ನೀವು ಉತ್ತರ ಕೊಡುತ್ತೀರೋ ಅಥವಾ ಸಹಕಾರ ಮಂತ್ರಿಗಳು ಉತ್ತರ ಕೊಡುತ್ತಾರೋ ಅಥವಾ ರೆವಿನ್ಯೂ ಮಂತ್ರಿಗಳು ಉತ್ತರ ಕೊಡುತ್ತಾರೋ ಎಂಬ ವಿಚಾರ ಬೇಕಾಗಿದೆ. ಈ ಬಡ್ಡಿ ಮನ್ನಾ ಮಾಡುವಂತಹ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೇ ಒಂದು ಘೋಷಣೆಯನ್ನು ಮಾಡಿ ಬಿಡಲಿ. ಏಕೆಂದರೆ ಎರಡೂವರೆ ವರ್ಷಗಳಾಗಿದೆ. ರೈತರಿಗೆ ಏನಾದರೂ ಒಂದು ದೊಡ್ಡದಾದಂತಹ ಕಾಣಿಕೆಯನ್ನು ಕೊಡುವಂತಹದು ಮಾನ್ಯ ಮುಖ್ಯಮಂತ್ರಿಗಳಿಂದ ಆಗಲಿ. ತಮಿಳುನಾಡಿನಲ್ಲಿ ರೈತರ ಸಮಸ್ಯೆಗಳ ಬಗ್ಗೆ ಸ್ಪಂದನೆ ಮಾಡಿ ತಮಿಳುನಾಡಿನ ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ. ಆಂಧ್ರ ಪ್ರದೇಶದಲ್ಲಿ ಬಡ್ಡಿ ಮನ್ನಾ ಮಾಡುವ ವಿಚಾರದಲ್ಲಿ ಘೋಷಣೆ ಮಾಡಿದ್ದಾರೆ. ಹೀಗಾಗಿ ಇಲ್ಲಿ ಇವತ್ತು ರೈತರು ಸಂಕಷ್ಟದಲ್ಲಿದ್ದಾರೆ. ಆ ಬಗ್ಗೆ ಘೋಷಣೆ ಮಾಡಬೇಕು. ರೈತರ ಜೀವನ ಒಳ್ಳೆಯ ರೀತಿಯಿಂದ ಇದ್ದರೆ ಅಥವಾ ಈ ಸಲ ಮಳೆ ಚೆನ್ನಾಗಿ ಬಂದಿದ್ದರೆ ನಾವು ರೈತರ ಪರವಾಗಿ ಇಲ್ಲಿ ಈ ಒಂದು ಬಡ್ಡಿ ಮನ್ನಾ ಮಾಡಿ ಅಥವಾ ಸಾಲದ ಅವಧಿಯನ್ನು ವಿಸ್ತರಣೆ ಮಾಡಿ ಎಂದು ಕೇಳುತ್ತಿರಲಿಲ್ಲ. ಆದರೆ ಅವರು ಸಂಕಷ್ಟದಲ್ಲಿ ಇದ್ದಾರೆ. ಮತ್ತೆ ಬರಗಾಲದ ಛಾಯೆ ಮೂಡಿದೆ. ಆದಕ್ಕಾಗಿ ಈ ಬಡ್ಡಿ ಮನ್ನಾ ಮಾಡಿ ಎಂಬ ಬೇಡಿಕೆಯನ್ನು ನಾವು ಇಡುತ್ತಿದ್ದೇವೆ. ಅದಕ್ಕೆ ಇನ್ನೂ ಸರ್ಕಾರದ ಕಡೆಯಿಂದ ಸ್ಪಂದನ ಇಲ್ಲ. ಅದಕ್ಕಾಗಿ ಮತೆತ ಇನ್ನೊಂದು ವಿಚಾರದಲ್ಲಿ ಇವತ್ತು ತಾವೇ ಉತ್ತರ ಕೊಡಬೇಕಾಗುತ್ತದೆ. ಈಗಾಗಲೇ ಹಿಂದಿನ ಎರಡೂ ಅಧಿವೇಶನದಲ್ಲಿ ನಾವು ಪ್ರಸ್ತಾಪ ಮಾಡಿದ್ದೇವೆ. ಇವತ್ತು ಕೊನೆಯ ಪಕ್ಷ ನೀವು ಉತ್ತರ ಹೇಳುವಂತಹ ಸಂದರ್ಭದಲ್ಲಿ ಈ ವಿಚಾರದ ಬಗ್ಗೆ ಏನಾದರೂ ಉತ್ತರ ಹೇಳುತ್ತೀರಿ ಎಂದು ನಾವು ನಿರೀಕ್ಷಣೆ ಮಾಡಿದ್ದೆವು. ಈ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರಿಗೆ ಕೊಡುವ ಪರಿಹಾರದ ವಿಚಾರ ಏನಾಯಿತು?

ಹಿಂದಕ್ಕೆ ನಿಮ್ಮ ಕಾಂಗ್ರೆಸ್ ನಾಯಕರು ಹಾಗೂ ಬೇರೆ ಬೇರೆ ನಾಯಕರು ಬಂದಾಗ ಎಲ್ಲಾ ಕಡೆ ಪತ್ರಿಕಾಗೋಷ್ಠಿಯಲ್ಲೂ ಸಹ ಈ ಪ್ರಶ್ನೆ ಕೇಳಿದ್ದಾರೆ ಮತ್ತು ಸದನದಲ್ಲಿ ಈ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ. ನೀವೊಂದು ಸ್ಪಷ್ಟವಾದ ಉತ್ತರವನ್ನು ಕೊಟ್ಟು ಬಿಡಿ. ರೈತರು ಆತ್ಮಹತ್ಯೆ ಏನು ಮಾಡಿಕೊಂಡಿದ್ದಾರೆ, ಡಾ॥ ವೀರೇಶ್ ಅವರು ಏನು ವರದಿ ಕೊಟ್ಟಿದ್ದಾರೆ. ಆ ವೀರೇಶ್ ವರದಿ ಪ್ರಕಾರ ನಾವು ನಡೆದು ಕೊಳ್ಳುತ್ತೇವೆ. ನಾವು ರೈತರ ಕುಟುಂಬಗಳಿಗೆ, ಆತ್ಮಹತ್ಯೆ ಮಾಡಿಕೊಂಡ ಕುಟುಂಬಗಳಿಗೆ ಪರಿಹಾರ ಧನ ಕೊಡುವುದಿಲ್ಲ. ನಮಗೆ ಕೊಡಲು ಆಗುವುದಿಲ್ಲ ಎನ್ನುವಂತಹ ಸ್ಪಷ್ಟ ಉತ್ತರವನ್ನಾದರೂ ಕೊಡಿ, ಇಲ್ಲದಿದ್ದರೆ. ಆಗುತ್ತದೆ ಎಂದರೆ ಯಾವಾಗ ಕೊಡುತ್ತೀರಿ, ಅದನ್ನಾದರೂ ಹೇಳಿ. ಒಂದೂವರೆ ವರ್ಷ ಆಯಿತು. ಅದನ್ನಾದರೂ ಸ್ಪಷ್ಟತೆ ಮಾಡಬೇಕು. ಇದರ ಬಗ್ಗೆ ತಮ್ಮ ಕಡೆಯಿಂದ ಏನೂ ಉತ್ತರ ಬರಲಿಲ್ಲ. ದಯವಿಟ್ಟು ಇದಕ್ಕೆಲ್ಲಾ ಸ್ಪಷ್ಟೀಕರಣ ನೀಡಬೇಕು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ.

3.40 ಪಿ.ಎಂ.

ಶ್ರೀ ಎ.ಎಸ್. ಕೌಜಲಗಿ:— ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುವುದಾದರೆ, ನಾವು 8ನೇ ತಾರೀಖಿಗೆ ಹಣವನ್ನು ಕಳುಹಿಸಿಕೊಟ್ಟಿದ್ದು, ಬಾಕಿ ಹಣವನ್ನು 15ನೇ ತಾರೀಖಿನಂದು ಕಳುಹಿಸಿಕೊಡಲಾಗುವುದು. 15ನೇ ತಾರೀಖಿನಂದು ಹಣವನ್ನು ಕಳುಹಿಸಿಕೊಟ್ಟರೂ ಸಹ ಅಲ್ಲಿಗೆ ಹೋಗಿ ತಲುಪಲು ಇನ್ನು 8-10 ದಿವಸಗಳು ಬೇಕಾಗುತ್ತದೆ. ಅದಕ್ಕೋಸ್ಕರ ಈ ತಿಂಗಳ ಅಂತ್ಯದೊಳಗೆ ಎಂದು ಹೇಳಿದೆ. II ಇನ್ನು ರೈತರ ಆತ್ಮಹತ್ಯೆ ಪ್ರಕರಣ ಕುರಿತಂತೆ ಕೇಳಿದ್ದೀರಿ ನಿನ್ನೆ ನಾನು ಮೇಲ್ಮನೆಯಲ್ಲಿ ಉತ್ತರಿಸುತ್ತಾ ಹೇಳಿದಂತೆ ಈಗಾಗಲೇ ಸುಮಾರು 135 ಆತ್ಮಹತ್ಯೆ ಪ್ರಕರಣಗಳು ವರದಿಯಾಗಿವೆ ಡಾ॥ ವಿರೇಶ್‌ರವರು ಸಲ್ಲಿಸಿದ ವರದಿಯು ಕ್ಯಾಬಿನೆಟ್ ಸಬ್‌ಕಮಿಟಿಯ ಮುಂದಿರುವುದರಿಂದ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ರೈತರ ಕುಟುಂಬಗಳಿಗೆ ಪರಿಹಾರ ಧನವನ್ನು ಯಾವರೀತಿ ವಿತರಿಸಬೇಕೆಂಬುದನ್ನು ಪರಿಶೀಲಿಸಿ ನಿರ್ಣಯ ಕೈಗೊಳ್ಳುತ್ತೇವೆ. ಈ ಹಿನ್ನೆಯಲ್ಲಿ ನಾನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ದಿನಾಂಕ 9ನೇ ಮಾರ್ಚ್ 1999ರಂದು ಕರ್ನಾಟಕ ರಾಜ್ಯಾದ್ಯಂತ ಬೆಳೆಗಳ ನಾಶದಿಂದ ರೈತರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ಕುರಿತಂತೆ ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾಗಿದ್ದ ಜಂಟಿ ಸದನ ಸಮಿತಿಯ ಅಂತಿಮ ವರದಿಯಲ್ಲಿನ ಕೆಲವು ಅಂಶಗಳನ್ನು ಈ ಸಂದರ್ಭದಲ್ಲಿ ನಾನು ಪ್ರಸ್ತಾಪಿಸಬಯಸುತ್ತೇನೆ. ಆ ಸಮಿತಿಯಲ್ಲಿ ಮಾನ್ಯ ಶ್ರೀಯುತರುಗಳಾದ ಡಿ.ಆರ್. ಪಾಟೀಲ್, ಸಿ.ಆರ್. ಸಗೀರ್ ಅಹಮದ್ ಕಾಗೋಡು ತಿಮ್ಮಪ್ಪ, ಜಗದೀಶ್ ಶೆಟ್ಟರ್, ಎ. ರಾಮದಾಸ್, ಗೋಪಾಲ ಪೂಜಾರಿ, ಬಸವರಾಜ ಬೊಮ್ಮಾಯಿ, ಇವೆಲ್ಲರೂ ಇದ್ದರು. ವರದಿಯಲ್ಲಿನ ಎಲ್ಲಾ ಶಿಫಾರಸ್ಸುಗಳನ್ನು ಓದುವುದಕ್ಕಿಂತ ಕೊನೆಯ ಎರಡು ಪ್ಯಾರಾಗಳನ್ನು ಮಾತ್ರ ನಾನು ಓದುತ್ತೇನೆ. "1997-98ನೇ ಸಾಲಿನಲ್ಲಿ ರಾಜ್ಯದಲ್ಲಿ ಅದಂಥ ಬೆಳೆ ನಷ್ಟ ಮತ್ತು ಆತ್ಮಹತ್ಯೆ ಪ್ರಕರಣಗಳ ಕುರಿತಂತೆ ಕೇವಲ ಅನುಕಂಪದ ಆಧಾರದ ಮೇಲೆ ಸರ್ಕಾರಿ ಮಟ್ಟದಲ್ಲಿ ಅವಲೋಕಿಸುವ ಬದಲಾಗಿ ಅಂತಹ ಸನ್ನಿವೇಶಗಳು ಸೃಷ್ಟಿಯಾಗಲು ಕಾರಣೀಭೂತವಾದ ಒಳಗಿನ ಮತ್ತು ಹೊರಗಿನ ವಿಷಯಗಳ ಬಗ್ಗೆ ಕೂಲಂಕುಷವಾಗಿ ಅಧ್ಯಯನ ಮಾಡಬೇಕಾಗಿರುವ ಅವಶ್ಯಕತೆ ಇದೆಯೆಂದು ಸಮಿತಿಯು ಭಾವಿಸುತ್ತದೆ. ಆದುದರಿಂದ, ಸಾಮಾಜಿಕ ವಿಜ್ಞಾನಿಗಳು, ಮನೋವಿಜ್ಞಾನಿಗಳು ಮತ್ತು ಆರ್ಥಿಕ ವಿಜ್ಞಾನಿಗಳನ್ನು ಒಳಗೊಂಡ ತಂಡವು

ಇಂತಹ ಪ್ರಕರಣಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಬೇಕು. ಪ್ರಕೃತಿ ವಿಕೋಪಕ್ಕಿಂತ ಬೆಳೆ ನಷ್ಟವಾಗಿ ಬೆಳೆ ನಷ್ಟ ಪರಿಹಾರಗಳನ್ನು ಮಾತ್ರ ಸಕಾಲಕ್ಕೆ ನೀಡುವ ವ್ಯವಸ್ಥೆ ಮಾಡುವುದು ಸಮಂಜಸ. ಜೊತೆಗೆ ಯಾವುದೇ ಕಾರಣದಿಂದ ಆತ್ಮಹತ್ಯೆ ಮಾಡಿಕೊಳ್ಳುವ ರೈತರಿಗೆ ಹೆಚ್ಚಿನ ಪ್ರಮಾಣದ ಪರಿಹಾರವನ್ನು ಘೋಷಿಸಿ ರೈತ ಸಮುದಾಯಕ್ಕೆ ತಿಳಿಯಬಯಸಿದಾಗ ಅಂತಹ ಪ್ರಕರಣಗಳಿಂದ ಮತ್ತಷ್ಟು ಹೆಚ್ಚಿನ ರೀತಿಯಲ್ಲಿ ದುಷ್ಪರಿಣಾಮಗಳಾಗುತ್ತದೆ. ಆದುದರಿಂದ, ಅಂತಹ ಸಂಪ್ರದಾಯಗಳನ್ನು ಮೊದಲು ಕೈಬಿಡಬೇಕು, ಬದಲಿಗೆ ರೈತರಲ್ಲಿ ಬೇಕಾಗಿರುವ ಸ್ವಾಭಿಮಾನ, ಸ್ವಾವಲಂಬನೆ, ಇತ್ಯಾದಿಗಳನ್ನು ಬೆಳೆಸುವ ಕಾರ್ಯಕ್ರಮಗಳನ್ನು ಸರ್ಕಾರ ರೂಪಿಸಿಕೊಳ್ಳಬೇಕಾಗಿದೆ. ಇದಲ್ಲದೆ ಇಂತಹ ಪ್ರಸಂಗಗಳು ಜೀವನದಲ್ಲಿ ಬಂದರೂ ಕೂಡ ಅದನ್ನು ಎದುರಿಸುವ ಮನೋಧೈರ್ಯವನ್ನು ಸಹ ಕಲ್ಪಿಸಬೇಕು" ಎಂದು ತಾವೇ ವರದಿಯಲ್ಲಿ ತಿಳಿಸಿದ್ದೀರಿ. ಈಗ ನಾವು ಡಾ।। ವಿರೇಶ್ ಅವರಿಗೂ ಸೀಮಿತವಾಗಿ ಕಾರ್ಯನಿರ್ವಹಿಸಲು ಜವಾಬ್ದಾರಿ ವಹಿಸಿದ್ದರಿಂದ ಅವರು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ರೈತರು ಯಾವ ರೀತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ? ಯಾವ ಕಾರಣಕ್ಕೋಸ್ಕರ ಮಾಡಿಕೊಂಡಿದ್ದಾರೆ ಇತ್ಯಾದಿ ವಿವಗಳನ್ನು ವರದಿಯನ್ನು ನಮೂದಿಸಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ರೈತರ ಆತ್ಮಹತ್ಯೆ ಪ್ರಕರಣ ಕುರಿತಂತೆ ತನಿಖೆ ನಡೆಸಿ ವರದಿ ಸಲ್ಲಿಸಲು ಈ ಹಿಂದೆ ರಚಿಸಲಾಗಿದ್ದ ಜಂಟಿ ಸದನ ಸಮಿತಿಯಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರೂ ಒಳಗೊಂಡಂತೆ ಇನ್ನಿತರ ಬಹಳಷ್ಟು ಸದಸ್ಯರಿದ್ದರು. ಜನತಾದಳದ ಸರ್ಕಾರ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಜಂಟಿ ಸದನ ಸಮಿತಿಯನ್ನು ರಚಿಸಲಾಗಿತ್ತು. ಆಗ ಆತ್ಮಹತ್ಯೆ ಮಾಡಿಕೊಂಡಿದ್ದ ಪ್ರತಿಯೊಂದು ರೈತ ಕುಟುಂಬಕ್ಕೆ ಭೇಟಿ ನೀಡಿದ್ದೆವು. ನಾವು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ತಿಳಿಸಿರುವುದೇನೆಂದರೆ, ತಜ್ಞರಿಂದ ಸಲಹೆ ಪಡೆದುಕೊಂಡು ಅಧ್ಯಯನ ಮಾಡಿ ಇನ್ನಿತರ ಪರಿಹಾರಗಳನ್ನು ಹುಡುಕಬೇಕೆನ್ನುವುದೂ ಸಹ ಸೇರಿದೆ. ಅಲ್ಲದೆ, ರೈತರಿಗೆ ಆತ್ಮಸ್ಥೈರ್ಯ ಕೊಡುವಂಥ ಕಾರ್ಯವಾಗಬೇಕೆಂದು, ಈ ಕುರಿತಂತೆ ಏನೇನು ಕ್ರಮ ಕೈಗೊಳ್ಳಬೇಕೆಂದೂ ಸಹ ತಿಳಿಸಿದ್ದೇವೆ. ಆದರೆ, ಅಧಿಕಾರಕ್ಕೆ ಬಂದ ಯಾವ ಸರ್ಕಾರಗಳೂ ಸಹ ಅದರತ್ತ ಗಮನಹರಿಸಲಿಲ್ಲ. ಇವೊತ್ತು ರೈತರ ಆತ್ಮಹತ್ಯೆ ಪ್ರಕರಣ ಕುರಿತಂತೆ ಸದನದಲ್ಲಿ ಚರ್ಚೆಯಾಗುತ್ತಿರುವ ಈ ಸಂದರ್ಭದಲ್ಲಿ ಜಂಟಿ ಸದನ ಸಮಿತಿ ವರದಿ ಹೊರಗೆ ಬಂದಿದೆ. ಇದುವರೆಗೂ ವರದಿ ಹೊರಗೆ ಬಂದಿರಲಿಲ್ಲ. ಹಿಂದೆ ಬೀದರ್ ಮತ್ತು ಗುಲ್ಬರ್ಗ ಈ ಎರಡೂ ಜಿಲ್ಲೆಗಳಲ್ಲೇ ಸುಮಾರು 18 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರು. ಆಗ ನಾವು-ನೀವೆಲ್ಲರೂ ಸೇರಿಕೊಂಡು ಆತ್ಮಹತ್ಯೆಗೊಳಗಾದ ರೈತ ಕುಟುಂಬಗಳಿಗೆ ಸೂಕ್ತ ಪರಿಹಾರ ಧನ ನೀಡಬೇಕೆಂದು ದೊಡ್ಡ ಪ್ರಮಾಣದಲ್ಲಿ ಹೋರಾಟ ಮಾಡಿದಾಗ ಆಗಿನ ಜನತಾದಳದ ಮಾನ್ಯ ಮುಖ್ಯಮಂತ್ರಿಗಳು ಜಂಟಿ ಸದನ ಸಮಿತಿಯನ್ನು ನೇಮಕ ಮಾಡಿದರು. ಸಮಿತಿಯಲ್ಲಿದ್ದ ನಾವುಗಳು ಆತ್ಮಹತ್ಯೆ ಮಾಡಿಕೊಂಡ ಪ್ರತಿಯೊಂದು ಕುಟುಂಬಕ್ಕೂ ಭೇಟಿ ನೀಡಿ ಅವರ ಅಳಲನ್ನು ಕೇಳಿದೆವು. ಆದರೆ. ಇವೊತ್ತು ನಾನು ಒಬ್ಬ ಜವಾಬ್ದಾರಿಯು ಜನಪ್ರತಿನಿಧಿಯಾಗಿ ಹೇಳುತ್ತಿರುವುದೇನೆಂದರೆ, ಡಾ।। ವೀರೇಶ್ ರವರು ಆತ್ಮಹತ್ಯೆ ಮಾಡಿಕೊಂಡಿರುವ ಎಷ್ಟು ರೈತ ಕುಟುಂಬಗಳನ್ನು ಭೇಟಿ ಮಾಡಿದ್ದಾರೆ ಎಂಬುದನ್ನು ಕೇಳಿ. ರಾಜ್ಯಾದ್ಯಂತ 150-160 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರೆ ಧಾರವಾಡ ಜಿಲ್ಲೆಯೊಂದರಲ್ಲಿಯೇ

ಸುಮಾರು 18-20 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಡಾ॥ ವಿರೇಶ್‌ರವರು ಆತ್ಮಹತ್ಯೆ ಮಾಡಿಕೊಂಡ ರೈತರ ಪೈಕಿ ಕೇವಲ 3-4 ಕುಟುಂಬಳಿಗೆ ಮಾತ್ರ ಭೇಟಿ ನೀಡಿದ್ದು ಬಿಟ್ಟರೆ ಬೇರೆ ರೈತ ಕುಟುಂಬಗಳನ್ನು ಭೇಟಿ ಮಾಡಿರುವುದಿಲ್ಲ. ರೈತ ಮುಖಂಡರನ್ನು ಒಳಗೊಂಡ ನಿಯೋಗ ಅವರನ್ನು ಭೇಟಿ ಮಾಡಿ ಆ ಕುರಿತ ವಿಷಯ ಪ್ರಸ್ತಾಪಿಸಲು ಬಯಸಿದರೆ ಅವರಿಗೆ ಪುರುಸೊತ್ತೇ ಇಲ್ಲ, ಅಂತಹವರು ಕಚೇರಿಯಲ್ಲಿ ಕುಳಿತು ವರದಿಯನ್ನು ತಯಾರಿಸಿದ್ದಾರೆ. ಆದರೆ, ನಾವು ಸರ್ಕಾರಕ್ಕೆ ರೈತರ ಆತ್ಮಹತ್ಯೆ ಪ್ರಕರಣ ಕುರಿತಂತೆ ವರದಿ ಸಲ್ಲಿಸುವ ಮುಂಚೆ ಆತ್ಮಹತ್ಯೆ ಮಾಡಿಕೊಂಡ ರೈತರ ಹಿನ್ನೆಲೆ, ಯಾವ ಕಾರಣಕ್ಕೋಸ್ಕರ ಆತ್ಮಹತ್ಯೆಗೊಳಗಾಗಿದ್ದರೆ ಮುಂತಾದ ಇನ್ನಿತರ ವಿಷಯಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದ್ದೇವೆ. ಒಂದು ವೇಳೆ ರೈತರು ವೈಯಕ್ತಿಕ ಕಾರಣಕ್ಕಾಗಿ ಆತ್ಮಹತ್ಯೆ ಮಾಡಿಕೊಂಡಿದ್ದರೆ ಪರಿಹಾರ ಧನ ನೀಡುವುದು ಬೇಡವೆಂದು ಸಲಹೆ ಮಾಡಿದ್ದೇವಲ್ಲದೆ, ನಿಜವಾಗಿಯೂ ಬೆಳೆ ನಷ್ಟದಿಂದ ಆತ್ಮಹತ್ಯೆ ಮಾಡಿಕೊಂಡಿರುವ ರೈತರಿಗೆ ಪರಿಹಾರ ನೀಡಬೇಕೆಂದು ಹೇಳಿ ಧಾರವಾಡ ಜಿಲ್ಲೆಯಲ್ಲಿ ಆತ್ಮಹತ್ಯೆಗೊಳಗಾದ 18 ರೈತರ ಪೈಕಿ 8-10 ರೈತರಿಗೆ ಪರಿಹಾರ ಧನ ವಿತರಿಸಬೇಕೆಂದು ಸರ್ಕಾಕ್ಕೆ ಶಿಫಾರಸ್ಸು ಮಾಡಿದ್ದೇವೆ. ನಾವು ಸರ್ಕಾರಕ್ಕೆ ಸಲ್ಲಿಸಿರುವ ವರದಿಯನ್ನು ತಾವು ಪೂರ್ತಿಯಾಗಿ ಓದಬೇಕು. ಕೊನೆಯ ಒಂದು ಪ್ಯಾರಾ ಓದುವ ಮೂಲಕ ಮತ್ತು ಅದಕ್ಕೆ ಡಾ॥ ವೀರೇಶ್ ಅವರ ವರದಿಯನ್ನು ಹೋಲಿಕೆ ಮಾಡುವುದು ಬೇಡ. ಕೃಷಿ ಇಲಾಖೆ ಮೇಲೆ ಚರ್ಚೆ ಕೈಗೊಂಡಾಗ ಆ ಬಗ್ಗೆ ಸುಧೀರ್ಘವಾಗಿ ಮಾತನಾಡುತ್ತೇನೆ. ನಾವು ಸರ್ಕಾರಕ್ಕೆ ವರದಿ ಸಲ್ಲಿಸಿದ ಬಳಿಕ ಆಗ ಎಷ್ಟು ರೈತ ಕುಟುಂಬಗಳಿಗೆ ಪರಿಹಾರ ಧನವನ್ನು ನೀಡಲಾಗಿತ್ತು? ಡಾ॥ ವೀರೇಶ್‌ರವರು ಆ ಕುರಿತು ತಮ್ಮ ವರದಿಯಲ್ಲಿ ಏನಾದರೂ ಶಿಫಾರಸ್ಸು ಮಾಡಿದ್ದಾರೆಯೇ? ಯಾವುದೇ ಒಂದು ಕೇಸ್‌ಗಾದರೂ ರೆಫರೆನ್ಸ್ ಮಾಡಿದ್ದಾರೆಯೇ? ಯಾರಿಗೂ ಪರಿಹಾರ ಧನ ನೀಡುವುದು ಬೇಡವೆಂದು ಸಾರಸಗಟಾಗಿ ಡಾ॥ ವೀರೇಶ್‌ರವರು ಹೇಳಿದರು. ಹೀಗಾಗಿ ವ್ಯತ್ಯಾಸವುಂಟಾಗಿರುವುದರಿಂದ ತಾವು ಆಮೂಲಾಗ್ರವಾಗಿ ಎರಡೂ ವರದಿಗಳನ್ನು ಅಧ್ಯಯನ ಮಾಡಬೇಕಾಗುತ್ತದೆ ವಿನಃ ವರದಿಯಲ್ಲಿನ ಯಾವುದೋ ಒಂದು ವಾಕ್ಯವನ್ನು ತೆಗೆದುಕೊಳ್ಳುವುದಲ್ಲ. ಆದುದರಿಂದ, ಈ ಕುರಿತಂತೆ ನಾನು ಸ್ಪಷ್ಟೀಕರಣ ನೀಡಿದ್ದೇನೆ. ಈ ಹಿಂದೆ ಮಾನ್ಯ ಮುಖ್ಯಮಂತ್ರಿಯವರು ಹಾಗೂ ಕೃಷಿ ಸಚಿವರು ರೈತರ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮ್ಯಾಜಿಸ್ಟ್ರಿಯಲ್ ಎನ್‌ಕ್ವೈರಿ ಅಥವಾ ಡಿಸ್ಟ್ರಿಕ್ಟ್ ಜಡ್ಜ್ ಅವರಿಂದ ಎನ್‌ಕ್ವೈರಿ ಮಾಡಲಾಗುವುದೆಂದು ಹೇಳಿದ್ದರೂ ನನಗೆ ಬಂದಿರುವ ಮಾಹಿತಿ ರೀತ್ಯ ಈ ಕುರಿತ ಸೂಚನೆ ಯಾವುದೇ ಡಿ.ಸಿ. ಕಚೇರಿಗಾಗಲೀ, ಅಸಿಸ್ಟೆಂಟ್ ಕಮೀಷನರ್ ಅವರ ಕಚೇರಿಗಾಗಲೀ ಹೋಗಿಲ್ಲ. ಹಾಗಾದರೆ, ಇವೊತ್ತಿನವರೆಗೆ ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ನೀಡಿದುಂದಥ ಹೇಳಿಕೆಗೆ ಏನಾದರೂ ಮಹತ್ವವಿದೆಯೇ? ನಾನು ಹಲವು ಜಿಲ್ಲೆಯ ಡಿ.ಸಿಯವರಿಗೆ ಕೇಳಿದ್ದರೂ ಸರ್ಕಾರದಿಂದ ಈ ಬಗ್ಗೆ ಯಾವುದೇ ಸೂಚನೆ ಬಂದಿಲ್ಲವೆನ್ನುತ್ತಿದ್ದಾರೆ. ಸರ್ಕಾರದಿಂದ ಸೂಚನೆಯೇ ಬಂದಿಲ್ಲವೆಂದ ಮೇಲೆ ಏನು ಎನ್‌ಕ್ವೈರಿ ಮಾಡುವುದು? ಎನ್ನುತ್ತಿದ್ದಾರೆ. ನೀವು ಇದನ್ನು ಅವಾಯ್ಡ್ ಮಾಡುತ್ತಿದ್ದೀರಾ? ಹೇಗೆ? ಅವರಿಗೆ ಪರಿಹಾರ ಧನ ಕೊಡುವುದಕ್ಕಾಗುತ್ತದೆಯೇ? ಇಲ್ಲವೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಮಾನ್ಯ ಸಚಿವರಾದ ಘೋರ್ಪಡೆಯವರ ಕಂಪನಿಗೆ 46 ಕೋಟಿ ರೂಪಾಯಿಗಳನ್ನು ಕೊಡುತ್ತೀರಿ. ಆದರೆ, ಆತ್ಮಹತ್ಯೆ ಮಾಡಿಕೊಂಡ ಪ್ರತಿ ರೈತ ಕುಟುಂಬಕ್ಕೆ ತಲಾ ಒಂದು ಲಕ್ಷ ರೂಪಾಯಿಗಳ ಪರಿಹಾರ ಧನ

ಕೊಡುವುದಕ್ಕಾಗುವುದಿಲ್ಲವೇ? ಕರ ಸಮಾಧಾನ ಯೋಜನೆಯಡಿ ಇವೊತ್ತು ಸಾರಾಯಿ ಲಾಬಿಗೆ ನೂರಾರು ಕೋಟಿ ರೂಪಾಯಿಗಳಷ್ಟು ವಿನಾಯತಿ ನೀಡುತ್ತೀರಿ. ಆದರೆ, ರೈತರಿಗೆ ಪರಿಹಾರ ಧನ ಕೊಡುವುದಕ್ಕಾಗುವುದಿಲ್ಲ. ಅಲ್ಲವೇ? ಕೊಡುವುದಕ್ಕಾಗುವುದಿಲ್ಲವೆಂದರೆ ಆಗುವುದಿಲ್ಲವೆಂದು ಹೇಳಿ. ಬದಲಿಗೆ ಇದನ್ನು ಅವಾಯ್ಡ್ ಮಾಡುವುದಲ್ಲ. ಆಗಾಗಲೇ ಡಾ|| ವೀರೇಶ್ ಕಮಿಟಿ ರಿಪೋರ್ಟ್ ಆಯಿತು. ಮ್ಯಾಜಿಸ್ಟೀಯಲ್ ಎನ್‌ಕ್ವೈರಿ ಆಯಿತು. ಡಿಸ್ಟ್ರಿಕ್ ಜಡ್ಜ್ ಎನ್‌ಕ್ವೈರಿ ಆಯಿತು. ಈಗ ಕ್ಯಾಬಿನೆಟ್ ಸಬ್-ಕಮಿಟಿ ಎಂದು ಹೇಳುತ್ತಿದ್ದೀರಿ. ಹಾಗಾದರೆ, ಪರಿಹಾರ ಧನ ಕೊಡಲು ನಿಮಗೆ ಮನಸಿಲ್ಲವೆಂದು ಹೇಳಿ. ಇವೊತ್ತು ರಾಜ್ಯ ಸರ್ಕಾರಕ್ಕೆ ರೈತರ ಬಗೆಗಿರುವ ಕಳಕಳಿ, ಆ ಕುರಿತು ನೀಡಿದಂತಹ ಉತ್ತರ ಸರಿಯಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):- ಆಪರೇಟಿವ್ ಪಾರ್ಟ್ ಆಫ್ ದಿ ರೆಕಮಂಡೇಷನ್ ಆಪ್ ಜಗದೀಶ್ ಶೆಟ್ಟರ್ ಸದನದ ಸಮಿತಿಯ ವರದಿಯನ್ನು ಮಾನ್ಯ ಕೃಷಿ ಸಚಿವರು ಓದಿದ್ದು ಆಪರೇಟಿವ್ ಪಾರ್ಟ್ ತಾವೇನು ಸೂಚನೆ ಮಾಡಿದ್ದೀರೆಂದರೆ, ಅನುಕಂಪದ ಆಧಾರದ ಮೇಲೆ ನಾವು ಯಾರೂ ರೈತರಿಗೆ ಉತ್ತೇಜನ ಕೊಡಬಾರದು, ಅವರ ಆತ್ಮಾಭಿಮಾನ, ಸ್ವಾಭಿಮಾನ ಇವುಗಳಿಗೆ ನಾವಿನ್ನೂ ಶಕ್ತಿಯನ್ನು ತಂದುಕೊಡಬೇಕು ಎಂದು ಆ ವರದಿಯಲ್ಲಿ ತಾವು ಇನ್ನೂ ಏನೇನು ಅಪ್ಪಣೆ ಕೊಡಿಸಿದ್ದೀರಿ. ಇದು ಪ್ರಶ್ನೋತ್ತರ ಕಾಲವಲ್ಲ, ತಮ್ಮನ್ನು ನಾನು ಕೇಳತಕ್ಕದ್ದು ಏನೆಂದರೆ, ಅದಕ್ಕೆ ತಾವು ಬದ್ಧರಾಗಿದ್ದೀರಾ?

ಶ್ರೀ ಜಗದೀಶ್‌ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಖಂಡಿತವಾಗಿ, ಅದರ ಎನ್‌ಟೈರ್ ರಿಪೋರ್ಟ್ ಏನಿದೆ ಅದಕ್ಕೆ ನಾನು ಬದ್ಧನಾಗಿದ್ದೇನೆ. ನಾನು ಆ ಸಮಿತಿಯ ಸದಸ್ಯನಾಗಿದ್ದೆ.ಆ ವರದಿಯಲ್ಲಿರುವುದಕ್ಕೆಲ್ಲಾ ನಾನು ಬದ್ಧನಿದ್ದೇನೆ. ಅದನ್ನು ಸ್ಟಡೀ ಮಾಡಿಸಿ, ನಾನು ಅದಕ್ಕೆ ಬದ್ಧನಿದ್ದೇನೆ.

Sri S.M. Krishna: Entire report,as a whole.

ಶ್ರೀ ಜಗದೀಶ್‌ಶೆಟ್ಟರ್:- ಎಸ್. ಅದನ್ನು ಸ್ಟಡಿ ಮಾಡಿಸಿ. ಅದಕ್ಕೆ ನಾನು ಬದ್ಧನಾಗಿದ್ದೇನೆ.

ಶ್ರೀ ಅಂರಗಜ್ಞಾನೇಂದ್ರ:- ಮುಂದೆ ಅದರಲ್ಲಿ ಕಾಂಪನ್‌ಸೇಷನ್ ಕೊಡಬೇಕೆಂದು ಹೇಳಿದ್ದಾರೆ. ಅದನ್ನು ಮಾನ್ಯ ಮಂತ್ರಿಗಳು ಓದುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು:- ಸನ್ಮಾನ್ಯ ಅಧ್ಯಕ್ಷರೆ, On the recommendation of the Joint Select Committee, a Fact finding committee was constituted. ಆ ಫ್ಯಾಕ್ಟ್ ಫೈಂಡಿಂಗ್ ಸಮಿತಿಯವರು ಒಂದು ವರದಿ ಕೊಟ್ಟರು. It is yet under the consideration of the Government. I do not know why so much of fuss has been created. ನಿಮ್ಮ ಶಿಫಾರಸ್ಸಿನ ಮೇರೆಗೆ ಸಮಿತಿ ರಚನೆಯಾಗಿದೆ. ಆ ಸಮಿತಿ ಸಹ ಏನು ಫ್ಯಾಕ್ಟ್ ಫೈಂಡಿಂಗ್ ಮಾಡಬೇಕು ಎಂಬ ಸೂಚನೆ ಕೊಟ್ಟಿದೆ, ಆ ಸೂಚನೆಯ ಪ್ರಕಾರ ಅವರು ವರದಿ ಕೊಟ್ಟಿದ್ದಾರೆ. ಸರ್ಕಾರ ಅದನ್ನು ನೋಡುವುದು ಬೇಡವೆ? ಕಂಪ್ಯಾರಿಟೀವ್ ಸ್ಟಡಿ ಮಾಡೋಣ.

ಶ್ರೀ ಜಗದೀಶ್‌ಶೆಟ್ಟರ್:- ಕೃಷಿ ಇಲಾಖೆಯ ಬಗ್ಗೆ ಚರ್ಚೆಗೆ ಬಂದಾಗ ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡೋಣ

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಬರ ಪರಿಹಾರದ ವಿಚಾರದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ನಿರೀಕ್ಷೆ ಮಾಡಿದ್ದೆ. ಕೃಷಿ ಇಲಾಖೆಗೆ ಸಂಬಂಧಪಟ್ಟಂತೆ ಅವರು ಹೊಸದಾಗಿ ಸಚಿವರಾಗಿದ್ದಾರೆ, ಮಾನ್ಯ ಕೌಜಲಗಿಯವರಿಂದ ಹೆಚ್ಚಿನ ಉತ್ತರವನ್ನು ನಾನು ನಿರೀಕ್ಷೆ ಮಾಡಿರಲಿಲ್ಲ. ಗಂಗಾ ಗೋದವರಿ ನದಿಗಳ ಜೋಡಣೆ ಬಗ್ಗೆ ಕೇಂದ್ರ ಸರ್ಕಾರ ವಿರೋಧ ಪಕ್ಷದವರು ಒಳ್ಳೆಯ ಸಲಹೆಗಳನ್ನು ಕೊಡಿ, ನಾವೆಲ್ಲಾ ಇಂಪ್ಲಿಮೆಂಟ್ ಮಾಡುತ್ತೇವೆ ಎಂದು ಸಾಧುಗಳು ಸನ್ಯಾಸಿಗಳು ಮಾತನಾಡುವಂತೆ ಅವರು ಮಾತನಾಡಿದ್ದಾರೆ. ವಿರೋಧ ಪಕ್ಷದವರು ಉತ್ತಮವಾದ ಸಲಹೆ ಕೊಡಿ, ಮಾನ್ಯ ಎಸ್.ಎಸ್. ಪಾಟೀಲರು ಗಾಂಧಿವಾದಿಗಳು ಬಹಳ ಒಳ್ಳೆಯ ಸಲಹೆಯನ್ನು ಬೆಳೆ ವಿಮಾದ ಬಗ್ಗೆ ಕೊಟ್ಟಿದ್ದೀ ಎಂದೆಲ್ಲಾ ಮಾತನಾಡಿ, ಪರ್ಯಾಯ ಬೆಳೆ ತಯಾರು ಮಾಡಿದ್ದೇನೆ ಸದನಕ್ಕೆ ತೋರಿಸುತ್ತೇನೆಂದು ಹೇಳಿ ಬರೀ ಕೈ ತೋರಿಸಿ ಜಲಾನಯನ ಪ್ರದೇಶದ ಅಭಿವೃದ್ಧಿಯನ್ನು ಮಾಡುತ್ತಿದ್ದೇವೆ ಎಂದು ಹೇಳಿ 25 ವರ್ಷಗಳಿಂದರೂ ಜಲಾನಯನ ಪ್ರದೇಶದ ಅಭಿವೃದ್ಧಿ ಕೆಲಸಗಳು ಆಗುತ್ತಲೇ ಇದೆ. ಇವರು ಕೊಟ್ಟ ಉತ್ತರ ಬೆಟ್ಟವನ್ನು ಅಗೆದು ಇಲಿಯನ್ನು ಹಿಡಿದಂತಾಗಿದೆ. ಬರಗಾಲದಲ್ಲಿ ಕರ್ನಾಟಕ ರಾಜ್ಯದ ರೈತರು ಯಾರು ಸಾಯುತ್ತಿದ್ದಾರೆ ಆ ರೈತರಿಗೆ ಇಲಿಯ ಬಾಲವನ್ನು ಕೊಟ್ಟಿದ್ದಾರೆ. ನಾವು ಮುಖ್ಯವಾಗಿ ಸರ್ಕಾರದಿಂದ, ಮಾನ್ಯ ಮುಖ್ಯಮಂತ್ರಿಯವರಿಂದ ನಿರೀಕ್ಷೆ ಮಾಡಿದ್ದೇನೆಂದರೆ, ರೈತರ ಆತ್ಮಹತ್ಯೆ ವಿಚಾರದಲ್ಲಿ ಪರಿಹಾರದ ಬಗ್ಗೆ ಕೇಳಲು ನಮಗೆ ನೈತಿಕವಾದ ಹಕ್ಕಿದೆ. ಯಾರು ಜನತಾ ಪರಿವಾರದ 24 ಜನ ಶಾಸಕರ ಇಲ್ಲಿ ಕುಳಿತಿದ್ದೇವೆ ನಮಗೆ ಇದರ ಬಗ್ಗೆ ಕೇಳಲು ನೈತಿಕವಾದ ಹಕ್ಕಿದೆ. ನಾವು ರೈತರ ಪರವಾಗಿದ್ದೇವೆಂದು ಪದೇ ಪದೇ ಏಕೆ ಹೇಳತ್ತೇವೆಂದರೆ, ಇದೇ ಕಾರಣಕ್ಕೆ ಒಂದು ಲಕ್ಷ ರೂಪಾಯಿಗಳ ಪರಿಹಾರವನ್ನು ನಾವು ರೈತರಿಗೆ ಕೊಟ್ಟಿದ್ದೆವು. ಅದನ್ನು ಜನತಾ ದಳದಿಂದ ಕೊಟ್ಟಿರಲಿಲ್ಲ, ಜನತಾ ಪಕ್ಷದಿಂದ ಕೊಟ್ಟಿರಲಿಲ್ಲ. ಕರ್ನಾಟಕ ಸರ್ಕಾರದ ಬೊಕ್ಕಸದಿಂದ ನೊಂದಿರತಕ್ಕಂಥ, ಸತ್ತಿರತಕ್ಕಂಥ ರೈತ ಕುಟುಂಬದವರಿಗೆ ಕೊಟ್ಟಿದ್ದೇವೆ. ಆಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾನ್ಯ ಹೆಚ್.ಕೆ. ಪಾಟೀಲರು ವಿರೋಧ ಪಕ್ಷದ ನಾಯಕರಾಗಿ ಮುಕ್ತ ಕಂಠದಿಂದ ಮಾನ್ಯ ದೇವೇಗೌಡರನ್ನು ಮತ್ತು ಮಾನ್ಯ ಜೆ.ಹೆಚ್. ಪಟೇಲರನ್ನು ನಮ್ಮ ಕೆಲಸವನ್ನು ಮುಕ್ತ ಹೊಗಳಿದ್ದಾರೆ. ನೀವುನಮ್ಮ ಕಡೆಯಿಂದ ಹೊಗಳಿಸಿಕೊಳ್ಳಬೇಕೆಂದಿದ್ದರೆ, ಯಾರು ರೈತರು ಸತ್ತಿದ್ದಾರೆ ಅವರ ಕುಟುಂಬ ವರ್ಗದವರಿಗೆ ಈ ಕೂಡಲೇ ಪರಿಹಾರ ಧನವನ್ನು ಕೊಡಿ. ಡಾ|| ವೀರೇಶ್ ವರದಿಯ ಟರ್ಮ್ಸ್ ಆಫ್ ರೆಫೆರೆನ್ಸ್ ಏನು? ತಾವು ಯಾರನ್ನು ಫೂಲ್ ಮಾಡುತ್ತೀರಿ? ಡಾ|| ವೀರೇಶ್‌ರವರ ಬಗ್ಗೆ ನಮಗೆಲ್ಲರಿಗೂ ಬಹಳ ಗೌರವವಿದೆ ಅವರನ್ನು ಅಗ್ರಿಕಲ್ಚರಲ್ ಯೂನಿವರ್ಸಿಟಿಗೆ ವೈಸ್ ಚಾನ್ಸಲರ್ ಆಗಿ ಅಪಾಯಿಂಟ್ ಮಾಡಿ ಮಾಜಿ ಸಚಿವರಾದ ಮಾನ್ಯ ಭೈರೇಗೌಡರು ನಮ್ಮ ಪಕ್ಷದಲ್ಲೇ ಇದ್ದಾರೆ. ಡಾ|| ವೀರೇಶ್ ವರದಿಯ ಟರ್ಮ್ಸ್ ಅಫ್‌ರೆಫರೆನ್ಸ್ ಏನು? ಏನು ನೀವು ಹೇಳಿದ್ದದ್ದು ಅದನ್ನು ಅವರು ಮಾಡಿಕಳುಹಿಸಿದ್ದಾರೆ. ರೈತರ ಆತ್ಮಹತೆಗೆ ಪರಿಹಾರವನ್ನು ಕೊಡತಕ್ಕ ವಿಚಾರದಲ್ಲಿ ಸರ್ಕಾರ ನುಸುಳಿಕೊಂಡು ತಾಲ್ಲೂಕು ಮ್ಯಾಜಿಸ್ಟ್ರೇಟ್‌ಗಳಿಗೆ ತಮ್ಮ ಸರ್ಕಾರದಲ್ಲಿ ಒಬ್ಬ ರೈತ ಸತ್ತರೆ ಏಕೆ ಸತ್ತ ಎಂದು ಕೇಳಿದರೆ, ಬೀದಿಗಳಲ್ಲಿ ನಾಯಿಗಳು ಸತ್ತು ಬಿದ್ದಿರುತ್ತವಲ್ಲಾ

ಅವುಗಳನ್ನಾದರೂ ಟ್ರಾಫಿಕ್ ಪೋಲೀಸ್‌ನವರು ಎತ್ತಿಹಾಕುತ್ತಾರೆ. ನಿಮ್ಮ ಸರ್ಕಾರದ ಪ್ರತಿನಿಧಿ ತಹಶೀಲ್ದಾರರಿಗೆ ಅಲ್ಲಿಗೆ ಹೋಗಿ ನೋಡತಕ್ಕ ಸೌಜನ್ಯತೆಯೂ ಇಲ್ಲ. ಹೋಗಿ ನೋಡಿಸಿ ಎಂದು ಸಲಹೆ ಕೊಟ್ಟರೆ ಆ ಪರಿಹಾರ ಧನವನ್ನು ನಿಲ್ಲಿಸಿದಂಥ ಶಾಪ ತಮಗೆ ತಟ್ಟುವುದಿಲ್ಲವೇನು? ಅದನ್ನು ನಾವು ಕೇಳುತ್ತಿರತಕ್ಕದ್ದು ಆ ಪರಿಹಾರಧನವನ್ನು ಕೊಡಲು ತಮಗೆ ಇರುವ ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ ಏನು? This is out demand. We came have given ನೀವೂ ಅದನ್ನು ಕೊಡಿ.

ತಾವು ರಾಜಕೀಯ ಮಾಡುವುದಕ್ಕೆ ಪ್ರತಿ ಸಂದರ್ಭದಲ್ಲೂ ಮಾನ್ಯ ಚಂದ್ರೇಗೌಡರು ನಮ್ಮನ್ನು ರೇಗಿಸುತ್ತಾರೆ. ಶ್ರೀಮತಿ ಸೋನಿಯಾಗಾಂಧಿಯವರು ಆಂಧ್ರಪ್ರದೇಶಕ್ಕೆ ಹೋಗಿದ್ದರಲ್ಲಾ ಕಾಂಗ್ರೆಸ್ ಪಾರ್ಟಿಯಿಂದ ಕೊಟ್ಟರಲ್ಲಾ, ಆಗ ಎಲ್ಲಿಂದ ಬಂತು ದುಡ್ಡು?

ಅಧ್ಯಕ್ಷರು:- ದಯವಿಟ್ಟು ತಾವು ಒಳ್ಳೆಯ ಪದಗಳ ಉಪಯೋಗಿಸಿ.

ಶ್ರೀ ಡಿ.ಬಿ. ಚಂದ್ರೇಗೌಡ:- ನನಗೆ ಗೊತ್ತಿಲ್ಲ, ಸರ್ಕಾರ ನಡೆಸುವುದೆಂದರೆ ನಮ್ಮ ಹಿತಕ್ಕಾಗಿ ನಡೆಸುತ್ತಿಲ್ಲ ದೇಶದ ಜನರಿಗಾಗಿ ಅವರು ಸಲಹೆ ಕೊಡಲಿ, ಅವರೂ ಸಕಾರದಲ್ಲಿ ಇದ್ದು ಹೋದವರು. ಭಾಷೆಯ ಮೇಲೆ ಹತೋಟಿ ಇರುವವರು ಬಹಳ ವಿಪರೀತಕ್ಕೆ ಹೋಗುತ್ತಿದೆ. ಏನು ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ. ಎಂದರೆ ಹೇಗೆ? ಸರ್ಕಾರ ನಡೆಸುವವರೇನು ಮಾಲೀಕರೆ? ನಾವೇನು ಮಾಲೀಕರಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಚಂದ್ರೇಗೌಡರು ಸದನದಲ್ಲಿ ಸಂಸದೀಯ ಸಚಿವರಾದಮೇಲೆ ಯಾವ ಭಾಷೆಯಲ್ಲಿ ಮಾತನಾಡಿದ್ದಾರೆಂದರೆ, ಮಾನ್ಯ ಮುಖ್ಯಮಂತ್ರಿಯವರು ನಮಗೆ ಎರಡು ನಾಲಿಗೆ ಇದೆಯೆಂದು ಹೇಳಿದರು. ನಾವು ಎರಡೂವರೆ ವರ್ಷಗಳ ಕಾಲ ತಡೆದುಕೊಂಡಿದ್ದೇವೆ. ಎರಡು ನಾಲಿಗೆ ಇದೆ ಎಂದು ಹೇಳಿರುವುದನ್ನು ನಾವು ಇನ್ನೂ ಮರೆತಿಲ್ಲ.

ಅಧ್ಯಕ್ಷರು:- ಮಾನ್ಯ ಸಿಂಧ್ಯಾರವರು ಒಂದೆರಡು ಕ್ಲಾರಿಫಿಕೇಷನ್ಸ್ ಕೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಪ್ರಶ್ನೆ ಕೇಳುವುದಿರಲಿ, ಕ್ಲಾರಿಫಿಕೇಷನ್ ಕೇಳುವುದಿರಲಿ, ಜೀರೋ ಹವರ್ ಇರಲಿ, ಅವರು ಭಾಷಣ ಮಾಡಬಹುದು. ಆದರೆ ನಾವು ಉತ್ತರ ಹೇಳುವುದಕ್ಕೆ ನಿಂತರೆ ತಾವು ಅನುಮತಿ ಕೊಡದಿದ್ದರೆ ಹೇಗೆ?

ಅಧ್ಯಕ್ಷರು:- ಮಾನ್ಯ ಮಂತ್ರಿಯವರು ಉತ್ತರ ಹೇಳಿದ್ದಾರೆ, ಕ್ಲಾರಿಫಿಕೇಷನ್ ಕೇಳಿ ಎಂದು ಹೇಳಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಒಂದು ಲಕ್ಷ ರೂಪಾಯಿಗಳ ಪರಿಹಾರ ಧನವನ್ನು ಈ 180 ಜನ ಯಾರು ಸತ್ತಿದ್ದಾರೆ ಅವರಿಗೆ ಏನು ಕೊಡಬೇಕಾಗಿದೆ ಅದರಲ್ಲಿ ಪೋಲೀಸ್‌ನವರಿಗೆ ಆಡಳಿತ ಪಕ್ಷದವರಾದ ತಾವು ಹೇಳಿ ನೂರಾರು ಜನ ಸತ್ತಿರತಕ್ಕ ರೈತರ ಕುಟುಂಬಗಳನ್ನು ಇದು ಆತ್ಮಹತ್ಯೆಯಲ್ಲ ಎಂದು ಮುಚ್ಚಿಸಿದ್ದೀರಿ, ನನಗೆ ಆ ವಿಚಾರಗಳು ಗೊತ್ತಿದೆ 'ಅನ್-ನ್ಯಾಚ್ಯುರಲ್ ಡೆತ್ ಕೇಸ್' ಎಂದು ರಿಜಿಸ್ಟಾರ್ ಮಾಡಿಸಿದ್ದೀರಿ. ಲೆಕ್ಕಕ್ಕೆ ಇರುವುದು ಸತ್ತವರು 180 ಜನ. ಆ 180 ಜನ ರೈತ ಕುಟುಂಬದವರಿಗೆ ತಲಾ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟು ತಾವು ಪುಣ್ಯ

ಕಟ್ಟಿಕೊಳ್ಳಿ. ತಾವು ಇನ್ನೂ ಏಳೂವರೆ ವರ್ಷಗಳ ಕಾಲ ಅಧಿಕಾರದಲ್ಲಿರುತ್ತೇವೆಂದು ಹೇಳಿದ್ದೀರಲ್ಲಾ ನೀವು ಇರಿ, ನಮಗೇನೂ ಹೊಟ್ಟೇಕಿಚ್ಚಿಲ್ಲ. ಎರಡನೆಯದಾಗಿ ಬಿತ್ತನೆ ಬೀಜ ಸಿಗುತ್ತಿಲ್ಲವೆಂದು ಹೇಳಿದೆ. ಅದರ ಬಗ್ಗೆ ಉತ್ತರವಿಲ್ಲ. ನಮ್ಮ ಭಾಗದಲ್ಲಿ ಶೇಂಗಾ ಬಿತ್ತನೆ ಬೀಜ ಸಿಗಲೇ ಇಲ್ಲ. ಷಾರ್ಟ್‌ಟರ್ಮ್ ಕ್ರಾಪ್‌ಗೆ ಏನು ಮಾಡಿದ್ದೀರಿ ಅದನ್ನು ನಮಗೆಲ್ಲಾ ಸರ್ಕ್ಯುಲೇಟ್ ಮಾಡಿ. ಅದನ್ನು ತಾವು ಮಾಡಿಲ್ಲ. ನಾವೆಲ್ಲಾ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಅಂದಾಜು 25 ರಿಂದ 30 ಕೋಟಿ ರೂಪಾಯಿಗಳು ಬಾಕಿ ಇದೆಯೆಂದು ತಿಳಿದುಕೊಂಡಿದ್ದೆವು. The cat is out of te bag ಆದರೆ 60 ಕೋಟಿ ರೂಪಾಯಿಗಳ ಬಾಕಿ ಇದೆಯೆಂದು ತಾವೇ ಹೇಳುತ್ತಿದ್ದೀರಿ ನೀವೇನು ಪುಕಸಟ್ಟೆಯಾಗಿ ಕೊಡುತ್ತೀರಾ ರೈತರಿಗೆ? ಅವರು ಇನ್ ಶ್ಯೂರೆನ್ಸ್ ಹಣವನ್ನು ಕೊಟ್ಟಿದ್ದಾರೆ. ಜನರಲ್ ಇನ್ ಶೂರೆನ್ಸ್ ಕಂಪನಿಯಿಂದ ಬರಬೇಕು, ಅವರು ಕೊಡುತ್ತಾರೆ. ತಾವು ಹಣವನ್ನು ಕೊಡಿ, ಅದನ್ನು ಕೊಡುವುದಕ್ಕೆ ತಮಗೆ ಏಕೆ ಒಂದು ತಿಂಗಳು ಬೇಕು? ತಮ್ಮ ಟ್ರೆಜರಿಯಲ್ಲಿ ಹಣವಿಲ್ಲವೇ? ಇದನ್ನು ನಾವು ಕೇಳಬಾರದೆ? ಇದನ್ನೇ ನಾವು ಕೇಳುತ್ತಿರುವುದು. ಆ ದುಡ್ಡನ್ನು ತಾವು ತಕ್ಷಣವೇ ಬಿಡುಗಡೆ ಮಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ:- ತಾವು ಹೇಳುವ ಧಾಟಿ ಇದೆಯಲ್ಲ ಅದು

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಾನು ಇವರ ಬಗ್ಗೆ ಗೌರವವನ್ನಿಟ್ಟುಕೊಂಡಿದ್ದೇನೆ. ನಿನ್ನೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳುತ್ತಿದ್ದರು. ಏನು ಸಿಂಧ್ಯಾರವರೆ, ಮುಖ್ಯಮಂತ್ರಿಗಳಿದ್ದಾಗ ಸೌಮ್ಯವಾಗಿ ಮಾತನಾಡುತ್ತೀರಿ ಎಂದಿದ್ದರು, ಆದ್ದರಿಂದ ಮುಖ್ಯಮಂತ್ರಿಯವರ ಎದುರುಗಡೆಯೇ ಹೇಳಿದ್ದೇನೆ. ನಿಮ್ಮ ಟ್ರೆಜರಿಯಲ್ಲಿ ದುಡ್ಡಿಲ್ಲವೆಂದು ಹೇಳಿ; ನಿಮ್ಮ ವೀರಾವೇಶದ ಮಾತುಗಳು, ಅಧಿಕಾರ ತೆಗೆದುಕೊಂಡಾಗ ನಿಮ್ಮ ಬಿತ್ತಳಿಕೆಯಿಂದ ಬಂದಂಥ ಬಾಣಗಳು ಅದಕ್ಕೆ ನಾನು ಉತ್ತರ ಕೊಡುತ್ತಿರುವುದು.

ಅಧ್ಯಕ್ಷರು:- ತಾವು ಕ್ಲಾರಿಫಿಕೇಷನ್ ಕೇಳಿ ಎಂದರೆ, ಮುಖ್ಯಮಂತ್ರಿಗಳನ್ನು ಅಲ್ಲಿ ಕೇಳಿದ್ದಕ್ಕೂ ಅಗ್ರಿಕಲ್ಚರ್ ಮಂತ್ರಿಗಳ ಹತ್ತಿರ ಕೇಳುತ್ತಿರುವುದಕ್ಕೂ ಸಂಬಂಧವೇನಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಏಕೆಂದರೆ, ಶ್ರೀಮಾನ್ ಚಂದ್ರೇಗೌಡರು, ಮಾನ್ಯ ಸಂಸದೀಯ ಪಟುಗಳು, ಮಂತ್ರಿಗಳು, ಅನುಭವಸ್ಥರು ನನಗೆ ಪಾಠವನ್ನು ಹೇಳಿಕೊಟ್ಟಿದ್ದಕ್ಕೆ ನಾನು ವಾಪಸ್ ಪಾಠವನ್ನು ಕಲಿಸಿದೆ. ಇನ್ನೇನಿಲ್ಲ. ಈ ಸರ್ಕಾರ ರೈತ ಆತ್ಮಹತ್ಯೆಯ ವಿಚಾರದಲ್ಲಿ ಈ ಕುಟುಂಬಗಳೇನಿದೆ ಅವುಗಳಿಗೆ ತಕ್ಷಣ ಒಂದು ಲಕ್ಷ ರೂ ಹಣವನ್ನು ಬಿಡುಗಡೆ ಮಾಡಿ ಪಾಪದ ಕೆಲಸವನ್ನೇನು ಮಾಡಿದ್ದೀರಿ ಅದನ್ನು ಇವತ್ತಾದರೂ ತೊಳೆದುಕೊಳ್ಳಿ. ಎರಡನೆಯದಾಗಿ ತಾವೇನು ಷಾರ್ಟ್ ಟರ್ಮ್ ಬೆಳೆಗೆ ತಯಾರಿ ಮಾಡಿದ್ದೇವೆಂದು ಹೇಳಿದ್ದೀರಲ್ಲಾ ಅದನ್ನು ನಮಗೆ ತಿಳಿಸಿ, ನಾಳೆ ಶುಕ್ರವಾರ, ಶನಿವಾರ ನಮ್ಮ ಶಾಸಕರುಗಳೆಲ್ಲಾ ಅವರವರ ಕ್ಷೇತ್ರಗಳಿಗೆ ಹೋಗುತ್ತಾರೆ, ತಮ್ಮ ಶಾಸಕರೂ ಹೋಗುತ್ತಾರೆ, ಅವರೇನು ಡಿಸ್ಸಿಡೆಂಟ್ ಆಕ್ಟಿವಿಟೀಸ್ ಮಾಡಿಕೊಂಡು ಇಲ್ಲಿ ಕುಳಿತುಕೊಳ್ಳುವುದಿಲ್ಲ ತಾವು ಮಾಡಿರುವುದನ್ನು ಎಲ್ಲರಿಗೂ ಕೊಡಿ, ತಾವು ಕೊಟ್ಟರೆ ಅದನ್ನು ತೆಗೆದುಕೊಂಡು ಹೋಗಿ ಹೇಳುತ್ತಾರೆ. ಅಗ್ರಿಕಲ್ಚರ್ ಅಧಿಕಾರಿಗಳಿಗೆ, ತಹಶೀಲ್ದಾರರುಗಳಿಗೆ ಶನಿವಾರ ನಾನು ಸಭೆ ಕರೆದಿದ್ದೇನೆ, ಏನು ಮಾಡಿದೆ ಸರ್ಕಾರ? ತಾವು

ಅಸೆಂಬ್ಲಿಯಲ್ಲಿ ಕಟ್ಟಾಕಿದ್ದೇನು, ಕಿತ್ತಾಕಿದ್ದೇನು ಎಂದು ಕೇಳುತ್ತಾರೆ. ಆಗ ಎಂ.ಎಲ್.ಎ. ಗಳು ಹೇಳಬಹುದು. ಅದನ್ನು ತಾವು ಕೊಡಿ. ಆ 55 ಕೋಟಿ ರೂಪಾಯಿಗಳನ್ನು ನಾಳೆ ಬಿಡುಗಡೆ ಮಾಡಲು ತಮಗೆ ಇರುವ ತೊಂದರೆ ಏನು? ಇವತ್ತು ಟ್ರೆಜರಿ ಬ್ಯಾನ್ ಏನಾದರೂ ಇದೆಯೇ? ನಾಳೆ ಶುಕ್ರವಾರ ಟ್ರೆಜರಿ ಎರಡು ಗಂಟೆಯವರೆಗೆ ಇದೆಯಲ್ಲಾ?

ಅಧ್ಯಕ್ಷರು:- ಈ ತಿಂಗಳ ಕೊನೆಯೊಳಗೆ ಮಾಡುತ್ತೇನೆಂದು ಹೇಳಿದ್ದಾರಲ್ಲಾ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈ ತಿಂಗಳ ಕೊನೆಯವರೆಗೂ ರೈತರ ಗತಿ ಏನು? ಇವರೇನು ದಾನ ಕೊಡುತ್ತಿದ್ದೀರಾ, ಕೂಲಿ ಕೂಡುತ್ತಿದ್ದಾರಾ? ಇದು ಎರಡನೆಯದು, ಮೂರನೆಯದಾಗಿ, ಬರ ಪರಿಹಾರದ ನಿಧಿ ಸ್ಥಾಪನೆ ಮಾಡಿ ಎಂದು ನಾವು ಹೇಳಿದ್ದೆವು. ಅದೊಂದು ಉತ್ತಮವಾದ ಸಲಹೆಯಾಗಿತ್ತು. ಅದನ್ನು ಕನ್‌ಸಿಡರ್ ಮಾಡಲಿಕ್ಕೆ ನಿಮಗೆ ಇರತಕ್ಕ ತೊಂದರೆಯಾದರೂ ಏನು ಎನ್ನುವುದನ್ನು ತಾವು ಹೇಳಬೇಕು. 67 ಲಕ್ಷ ಹಸಿರು ಕಾರ್ಡ್‌ಗಳನ್ನು ನಾವು ಗುರುತು ಮಾಡಿದ್ದೆವು. It is good ಐದು ವರ್ಷಗಳ ಕಾಲ ಆಳುವುದಕ್ಕಾಗಿ ಕಾಂಗ್ರೆಸ್ ಪಾರ್ಟಿಯವರಿಗೆ ಜನ ಓಟು ಕೊಟ್ಟಿದ್ದಾರೆ. ನೀವು ಆಡಳಿತ ನಡೆಸಿ. ಆದರೆ ಬರಗಾಲ ಬಂದಿದೆ, ಜನ ಸಾಯುತ್ತಾ ಬಿದ್ದಿದ್ದಾರೆ. ಹೀಗಿರುವಾಗ ಇವರದ್ದು ಭಿನ್ನಮತವಂತೆ! ಅಲ್ಲಿ ಅಧಿಕಾರಿಗಳು ಇವರು ಭಿನ್ನಮತ ಎಂದ ತಕ್ಷಣ ಕೆಲಸ ಮಾಡದೇ ಸುಮ್ಮನಿದ್ದಾರೆ. ಡೆಪ್ಯುಟಿ ಚೀಫ್ ಮಿನಿಸ್ಟರ್ ಮಾಡಬೇಕಂತೆ...

ಅಧ್ಯಕ್ಷರು:- ಅವೆಲ್ಲಾ ಇಲ್ಲಿ ಬೇಡ. ಭಿನ್ನಮತದ ಬಗ್ಗೆ ಇಲ್ಲಿ ಮಾತನಾಡುವುದು ಬೇಡ. ಭಿನ್ನಮತ ಒಂದೇ ಪಾರ್ಟಿಗೆ ಸೀಮಿತವಲ್ಲ. ಅದು ಎಲ್ಲಾ ಪಾರ್ಟಿಗಳಲ್ಲೂ ಇರುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ ಭಿನ್ನಮತವನ್ನು ಹುಟ್ಟಿಸಿದವರೇ ಅವು. ನಮ್ಮದು ಜಗಳಹರಕ ಪಾರ್ಟಿ ಎಂದು ನಿಮ್ಮ ಮುಖ್ಯಮಂತ್ರಿಗಳೇ ನಿಮಗೆ ಹೇಳಿದ್ದು ನಾನು ಅಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ, ರೂಲಿಂಗ್ ಪಾರ್ಟಿಯವರು ಚೀಫ್ ಮಿನಿಸ್ಟರ್‌ರವರ ವಿರುದ್ಧ ಭಿನ್ನಮತ ಮಾಡಿರುವುದು ಆಲ್ ಇಂಡಿಯಾ ರೆಕಾರ್ಡ್ ಆಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ, ಇವರು ಬರೇ ಭಿನ್ನಮತದ ವಿಚಾರವನ್ನು ಇಲ್ಲಿ ಮಾತನಾಡುತ್ತಿದ್ದಾರೆ. ಅವರ ಪಾರ್ಟಿಯವರೇ ಇಲ್ಲಿ ಮುಖ್ಯಮಂತ್ರಿಯಾಗಿ ಕುಳಿತು ನಮ್ಮದು ಜಗಳಹರಕ ಪಾರ್ಟಿ, ಜನ ನಮ್ಮನ್ನು ನಂಬುವುದಿಲ್ಲ ಎಂದು ಹೇಳಿಕೊಂಡಿದ್ದರು. ಮಾನ್ಯ ಸಿಂಧ್ಯಾರವರು ಏಕೋ ಅದನ್ನು ಮರೆತು ಬಿಟ್ಟಿರುವಂತೆ ಕಾಣುತ್ತದೆ. ಆದರೆ ಏಕೋ ಅವರ ಭಾಷೆ.......

ಶ್ರೀ ಎಸ್.ಎಸ್. ಪಾಟೀಲ್:- ನಮ್ಮ ಮುಖ್ಯಮಂತ್ರಿಗಳು ಹೇಳಿದ್ದನ್ನೆಲ್ಲಾ ನೀವು ಒಪ್ಪಿಕೊಂಡಂತಾಯಿತು. ನಿಮಗೆ ಋಣ ತೀರಿಸುವುದಕ್ಕೆ ಆಗಿಲ್ಲ. ನಮ್ಮ ಮುಖ್ಯಮಂತ್ರಿಗಳು ನಮ್ಮದು ಜಗಳದ ಪಾರ್ಟಿ ಎಂದು ಹೇಳುವುದರ ಜೊತೆಗೆ ನಿಮ್ಮ ಬಗ್ಗೆಯೂ ಕೂಡ ಹೇಳಿದ್ದಾರೆ. 55 ವರ್ಷಗಳ ಕಾಲ ಅಧಿಕಾರ ಕೊಟ್ಟರೂ ನಿಮಗೆ ಜನರ ಋಣ ತೀರಿಸುವುದಕ್ಕೆ ಆಗಿಲ್ಲ.

ಅಧ್ಯಕ್ಷರು:- ಮಾನ್ಯ ಕೌಜಲಗಿಯವರೇ, ಅವರು ಏನೋ ಕ್ಲಾರಿಫಿಕೇಷನ್ ಕೇಳಿದ್ದಾರೆ. ನೀವು ಏನಾದರೂ ಉತ್ತರ ಹೇಳುವುದಿದ್ದರೆ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಪಾಟೀಲ್‌ರವರೇ, ಯಾರ್‍ಯಾರ ಋಣ ಎಷ್ಟೆಷ್ಟು ಇದೆಯೋ? ಯಾರಿಗೆ ಗೊತ್ತು? ಅದನ್ನೆಲ್ಲಾ ಇಲ್ಲಿ ಚರ್ಚೆ ಮಾಡಿದರೆ ಆಗುತ್ತದೆಯೇ? ಒಂದಲ್ಲ ಒಂದು ದಿವಸ ಅದು ಎಲ್ಲೋ ಒಂದು ಕಡೆ ತೀರ್ಮಾನವಾಗುತ್ತದೆ.

ಅಧ್ಯಕ್ಷರು:- ಮಾನ್ಯ ಕೌಜಲಗಿಯವರೇ, ದಯವಿಟ್ಟು ಉತ್ತರ ಕೊಡಿ.

ಶ್ರೀಮತಿ ಮೋಟಮ್ಮ:- ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರಾದ ಮಾನ್ಯ ಸಿಂಧ್ಯಾರವರು ರೈತರ ಬಗ್ಗೆ ಬಹಳ ಕಳಕಳಿ ಇಟ್ಟುಕೊಂಡು ಮಾತನಾಡುತ್ತಿದ್ದಾರೆ. ಹಿಂದಿನ ಸರ್ಕಾರದಲ್ಲೂ ನಾವು ರೈತರಿಗೋಸ್ಕರ ಬಹಳಷ್ಟು ಸಹಾಯ ಮಾಡಿದ್ದೇವೆ.ಅದಕ್ಕಾಗಿ ಅಂದು ವಿರೋಧ ಪಕ್ಷದಲ್ಲಿದ್ದ ಮಾನ್ಯ ಖರ್ಗೆಯವರು ಮತ್ತು ಇತರರು ಬಹಳ ಶಹಭಾಷ್ ಗಿರಿ ಕೊಟ್ಟರು ಎಂದು ಬಹಳ ವಕಾಲತ್ತಿನಿಂದ ಮಾತನಾಡುತ್ತಿದ್ದಾರೆ. ಇಲ್ಲಿರುವ ನಾವೆಲ್ಲರೂ ಸಹಾ ಒಂದಲ್ಲ ಒಂದು ರೀತಿಯಲ್ಲಿ ರೈತರ ಮೂಲದಿಂದಲೇ ಬಂದವರಾಗಿದ್ದೇವೆ. ಹಿಂದೆ ರೈತರಿಗೆ ಇಷ್ಟೆಲ್ಲಾ ಸಹಾಯ ಮಾಡಿ, ಈಗ ರೈತರ ಪರವಾಗಿಯೇ ಮಾನ್ಯ ಸಿಂಧ್ಯಾರವರು ವಕಾಲತ್ತು ವಹಿಸಿ ಮಾತನಾಡುತ್ತಿದ್ದಾರೆ. ಆದರೂ ರೈತರು ಏಕೆ ಹಿಂದಿನ ಸರ್ಕಾರಗಳಲ್ಲಿ ಇದ್ದಂತಹ ತಮ್ಮಗಳನ್ನು ಗುರುತಿಸಲಿಲ್ಲ? ನಿಮ್ಮ ಸಂಖ್ಯೆಯನ್ನು ಏಕೆ ಕಡಿಮೆ ಮಾಡಿದರು ಎಂದು ನನಗೆ ಆಶ್ಚರ್ಯವಾಗುತ್ತಿದೆ.

ಅಧ್ಯಕ್ಷರು:- ಆಯಿತು ಬಿಡಿ. ಮಾನ್ಯ ಶ್ರೀನಿವಾಸಗೌಡರೇ, ದಯವಿಟ್ಟು ಕುಳಿತುಕೊಳ್ಳಿ. ಒಂದಕ್ಕೊಂದು ಬೆಳಸಿಕೊಂಡು ಹೋಗುತ್ತಾ ಇದ್ದರೆ, there is no end.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ಮಾನ್ಯ ಅಧ್ಯಕ್ಷರೇ, ನಾನು ಕೇವಲ ಒಂದೇ ಒಂದು ನಿಮಿಷ ಮಾತ್ರ ಮಾತನಾಡುತ್ತೇನೆ.

ಅಧ್ಯಕ್ಷರು:- ದಯವಿಟ್ಟು ಬೇಡಿ. ನೀವು ಎದ್ದ ಮೇಲೆ ಅನಂತರ ಮಾನ್ಯ ಜಯಪ್ರಕಾಶ್ ಹೆಗ್ಗಡೆಯವರೂ ಸಹ ಎದ್ದೇಳುತ್ತಾರೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ಮಾನ್ಯ ಅಧ್ಯಕ,ರೇ, ದಯವಿಟ್ಟು ಒಂದೇ ಒಂದು ನಿಮಿಷ ಮಾತನಾಡುತ್ತೇನೆ. ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿರುವಾಗ, ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ನಮ್ಮ ಪಕ್ಕದ ಜಿಲ್ಲೆಯಲ್ಲಿ ಸತ್ತವರಿಗಾಗಿ ಕಾಂಗ್ರೆಸ್ ಪಾರ್ಟಿಯಿಂದ ಕಲೆಕ್ಟ್ ಮಾಡಿದ ಹಣವನ್ನು ಕೊಟ್ಟಿದ್ದಾರೆ. ಇಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿಕ್ಕೆ ರೈತರೇ ಕಾರಣರಾಗಿರುವಾಗ ಇಲ್ಲಿ ಏಕೆ ಅವರು ಭೇಟಿ ನೀಡಿ ಹಣವನ್ನು ಕೊಡುವುದಿಲ್ಲ?.......

ಅಧ್ಯಕ್ಷರು:- ಮಾನ್ಯ ಕೌಜಲಗಿಯರೇ, ದಯವಿಟ್ಟು ಮಾನ್ಯ ಸಿಂಧ್ಯಾರವರು ಕೇಳಿದ ಕ್ಲಾರಿಫಿಕೇಷನ್‌ಗಳಿಗೆ ರಿಪ್ಲೈ ಕೊಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ, ನಾನು 3-4 ಕ್ಲಾರಿಫಿಕೇಷನ್‌ಗಳನ್ನು ಕೇಳುತ್ತಿದ್ದೇನೆ. ಮೊದಲನೆಯದಾಗಿ, ಆ ಡಾ|| ವೀರೇಶ್ ವರದಿಯನ್ನು ಬಿಸಾಕಿ, 1 ಲಕ್ಷ

ರೂಪಾಯಿಗಳ ಪರಿಹಾರವನ್ನು ಸತ್ತ ರೈತರ ಕುಟುಂಬದವರಿಗೆ ದಯಮಾಡಿ ಕೊಡಿ. ಬಿತ್ತನೆ ಬೀಜ ಅವೈಲಬಲ್ ಇರುವಂತೆ ಮಾಡಿ. ಷಾರ್ಟ್ ಟರ್ಮ್ ಕ್ರಾಪ್ಸ್‌ಗೆ ಏನು ಆಲ್ಟರ್‌ನೇಟಿವ್ ಪ್ಲಾನ್ ಮಾಡಿದ್ದೀರಿ ಎಂಬುದನ್ನು ದಯವಿಟ್ಟು ತಿಳಿಸಿ. 55 ಕೋಟಿ ರೂಪಾಯಿಗಳ ರೈತರ ಬಾಕಿ ಏನಿದೆಯೋ ಅದನ್ನು ಕೂಡಲೇ ಬಿಡುಗಡೆ ಮಾಡಿ. ಇದಕ್ಕೇನು ನಿಮಗೆ ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ಏನು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಸಾಲ ವಸೂಲಾತಿ ನಿಲ್ಲಿಸಿ.....

ಅಧ್ಯಕ್ಷರು:- ಸ್ವಾಮಿ, ದಯವಿಟ್ಟು ಒಳ್ಳೆಯ ಪದಗಳನ್ನು ಬಳಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಹಾಗೆ ಎಂದರೆ ತಪ್ಪೇನು? ಸ್ವಾಮಿ.

ಅಧ್ಯಕ್ಷರು:- ಅದು ಬೇಕಾಗಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಿಮಗೆ ಏನು ಬೇಕೋ ಅದನ್ನೇ ಹೇಳಿಬಿಡಿ.

ಅಧ್ಯಕ್ಷರು:- ಅದು ಬೇಕಾಗಿಲ್ಲ. I don't like it. ತಾವು ಒಳ್ಳೆಯ ಪಾರ್ಲಿಮೆಂಟೇರಿಯನ್ ಆಗಿದ್ದೀರಿ. ಆದ್ದರಿಂದ ಒಳ್ಳೆಯ ಪಾರ್ಲಿಮೆಂಟೇರಿಯನ್ ಉಪಯೋಗಿಸುವಂತಹ ಪದಗಳನ್ನೇ ಬಳಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಆಯಿತು ಸ್ವಾಮಿ.

ಅಧ್ಯಕ್ಷರು:- ಮಾನ್ಯ ಸಿಂಧ್ಯಾರವರು ಯಾವತ್ತೂ ಈ ಟೈಪ್ ಮಾತನಾಡುತ್ತಿರಲಿಲ್ಲವಲ್ಲಾ. ಅವು ಯಾವಾಗಲೂ ಬಹಳ ಒಳ್ಳೆಯ ಶಬ್ದಗಳನ್ನೇ ಉಪಯೋಗಿಸುತ್ತಿದ್ದರು. ಇಂದು ಏನಾಗಿದೆ?

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು 'ನಿಮಗಿರುವ ತೊಂದರೆ ಏನು?' ಎಂದು ಕೇಳಿದರೆ ಇರುವ ತೊಂದರೆ ಹೇಳಬಹುದು. ಅದನ್ನು ಬಿಟ್ಟು ಈ ರೀತಿ ಹೇಳಿದರೆ, ಅದಕ್ಕೇನು ಉತ್ತರ ಹೇಳೋಣ?

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಆ ಪದಕ್ಕೆ ಬದಲಾಗಿ ನಾನು ಇನ್ನೊಂದು ಶಬ್ದವನ್ನು ಉಪಯೋಗಿಸಲೇ?

ಅಧ್ಯಕ್ಷರು:- ದಯವಿಟ್ಟು ಅದ್ಯಾವುದೂ ಬೇಡಿ. ಮಾನ್ಯ ಕೌಜಲಗಿಯವರೇ ಉತ್ತರ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಆ ಪದಕ್ಕೆ ಬದಲಾಗಿ 'ದೊಡ್ಡ ರೋಗ' ಎಂದು ಇಟ್ಟುಕೊಳ್ಳಬಹುದು. ನನಗೇನೂ ಅದರಿಂದ ತಾಪತ್ರಯವಿಲ್ಲ. ಮಾನ್ಯ ಅಧ್ಯಕ್ಷರೇ ನಾನಿನ್ನೂ ಮುಗಿಸಿಲ್ಲ. ಮಾನ್ಯ ಚಂದ್ರೇಗೌಡರು ಹಿರಿಯ ಮಂತ್ರಿಗಳಾಗಿದ್ದೀರಿ 67 ಲಕ್ಷ ಹಸಿರು ಕಾರ್ಡ್‌ಗಳನ್ನೆಲ್ಲಾ ತಾವು ತಾತ್ಕಾಲಿಕವಾಗಿ ತಡೆಗಟ್ಟಿದ್ದೀರಿ. ದೇವರ ದಯೆಯಿಂದ ಇನ್ನು 8-10 ದಿವಸಗಳಲ್ಲಿ ಮಳೆ ಬಂದರೆ, ಏನಾದರೂ ಅಡ್ಜಸ್ಟ್ ಮಾಡಿಕೊಂಡು ಹೋಗಬಹುದು. ಮುಂಗಾರು ಬೆಳೆ ಇಲ್ಲದಿದ್ದರೂ ನಡೆಯುತ್ತದೆ. ಹೇಗೋ ನಡೆದುಕೊಂಡು ಹೋಗುತ್ತದೆ. ಅವರಿಗೆ ಕಾಳುಗಳನ್ನು ಕೊಡುವ ಹಾಗೆ ತಾವು ತಕ್ಷಣ ವ್ಯವಸ್ಥೆ ಮಾಡಬೇಕು. ಸಾಲ ವಸೂಲಾತಿಯನ್ನು ತಕ್ಷಣ ನಿಲ್ಲಿಸಬೇಕು. ಇದರ ಜೊತೆಗೆ ಬಡ್ಡಿ ಮನ್ನಾ ಮಾಡಬೇಕು. ನೀವೇನಾದರೂ ಅಕಸ್ಮಾತ್ ಬಡ್ಡಿ ಮನ್ನಾ ಮಾಡದೇ

ಹೋದರೆ, ನಮ್ಮ ಸರ್ಕಾರ ಬಂದ ಮೇಲೆ, ಜನ ನಮ್ಮ ಮೇಲೆ ವಿಶ್ವಾಸ ಇಟ್ಟು ನಮಗೆ ಮತ್ತೆ ಅಧಿಕಾರ ಕೊಟ್ಟರೆ ನಾವು ಖಂಡಿತವಾಗಿಯೂ ಕೂಡ ಬಡ್ಡಿ ಮನ್ನಾವನ್ನು ಮಾಡುತ್ತೇವೆ. ಆದರೆ ಇದನ್ನು ತಾವು ಮಾಡಬೇಕೆನ್ನುವುದೇ ನಮ್ಮ ಅಗ್ರಹವಾಗಿದೆ.

ಶ್ರೀ ಎ. ನಾಗರಾಜ್:- ಮಾನ್ಯ ಅಧ್ಯಕ್ಷರೇ, ದಯವಿಟ್ಟು ನನ್ನದೊಂದು ಕ್ಲಾರಿಫಿಕೇಷನ್ ಕೇಳಲು ಅವಕಾಶ ಮಾಡಿಕೊಡಿ. ಈಗ ರೈತರು ಬೆಳೆ ವಿಮೆ ಪ್ರಯೋಜನ ಪಡೆಯುವುದಕ್ಕೆ ಜುಲೈ 31ನೇ ತಾರೀಖು ಕಟ್ ಆಫ್ ಡೇಟ್ ಇದೆ. ಈಗ ಕೋಲಾರ ಜಿಲ್ಲೆಯಲ್ಲಿ ಯಾರೂ ಬಿತ್ತನೆಯನ್ನೇ ಮಾಡಿಲ್ಲ. ನಾವು ಸ್ವಾಭಾವಿಕವಾಗಿ ಆಗಸ್ಟ್ ಮೊದಲ ವಾರದಲ್ಲಿ 15ನೇ ತಾರೀಖಿನೊಳಗಾಗಿ ಬಿತ್ತನೆ ಮಾಡುತ್ತೇವೆ. ಇದು ಕೇಂದ್ರ ಸರ್ಕಾರದ ಕಟ್ ಆಫ್ ಡೇಟ್ ಎಂಬುದು ನನಗೆ ಗೊತ್ತಿದೆ. ಆದ್ದರಿಂದ ಆಗಸ್ಟ್ 31ರವರೆಗೂ ಅದನ್ನು ವಿಸ್ತರಣೆ ಮಾಡುವುದಕ್ಕೆ ಸರ್ಕಾರ ಕೇಂದ್ರ ಸರ್ಕಾರದವರ ಮೇಲೆ ಒತ್ತಡ ತರುತ್ತದೆಯೇ?

ಶ್ರೀ ವಿ.ಎಸ್. ಕೌಜಲಗಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯಾರವರು ಕೇಳಿದ ಸ್ಪಷ್ಟೀಕರಣಗಳಿಗೆ ನಾನು ಹೀಗೆ ಹೇಳಬಯಸುತ್ತೇನೆ. ಬಾಕಿ ಇರುವ ಹಣವನ್ನು 15,07,2002ರೊಳಗಾಗಿ ಕೊಟ್ಟು ಮುಟ್ಟಿಸುತ್ತೇವೆ. ಆದರೆ ಅದು ರೈತರಿಗೆ ಹೋಗಿ ಮುಟ್ಟುವುದಕ್ಕೆ ಸ್ವಲ್ಪ ಸಮಯ ಹಿಡಿಯುತ್ತದೆ. ಅದಕ್ಕಾಗಿ ನಾನು ಈ ತಿಂಗಳ ಕೊನೆಯ ಅಖೈರು ಎಂದು ಹೇಳಿದೆ. ಬಿತ್ತನೆ ಬೀಜದ ಬಗ್ಗೆ ಹೇಳುವುದಾದರೆ, ಈಗಾಗಲೇ ನಾವು ಸುಮಾರು 30 ಸಾವಿರ ಕ್ವಿಂಟಾಲ್ ಬೀಜಗಳನ್ನು ರೈತ-ಮಿತ್ರ ಕೇಂದ್ರಗಳಲ್ಲಿ ಇಟ್ಟಿದ್ದೇವೆ. ಈವರೆಗೆ ಸುಮಾರು 8,700 ಕ್ವಿಂಟಾಲ್‌ನಷ್ಟು ಪೂರ್ಣವಾಗಿ ಉಪಯೋಗವಾಗಿದೆ. ಇನ್ನೂ ಸುಮಾರು 21 ಸಾವಿರ ಚಿಲ್ಲರೆ ಬೀಜ ನಮ್ಮ ಕೇಂದ್ರಗಳಲ್ಲಿ ಇವೆ. 8,898 ಕ್ವಿಂಟಾಲ್ ನೆಲಗಡಲೆ ಬೀಜವನ್ನು ನಾವು ಸಂಗ್ರಹಿಸಿ ಇಟ್ಟಿದ್ದೇವೆ. ಮಾನ್ಯ ನಾಗರಾಜ್‌ರವರ ಸಲಹೆಯ ಬಗ್ಗೆ ಹೇಳುವುದಾದರೆ, ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಂತಹ ವಿಷಯವಾಗಿದೆ. ಅದನ್ನು ನಾವು ಪರಿಶೀಲನೆ ಮಾಡಿ ಹೇಳುತ್ತೇವೆ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ಬಿತ್ತನೆ ತಡವಾಗುತ್ತಿರುವ ಕಾರಣದಿಂದಾಗಿ ಸಹಕಾರ ಸಂಘಗಳಲ್ಲಿ ರೈತರಿಗೆ ಸಾಲ ಸಿಕುತ್ತಿಲ್ಲ. ಇಲ್ಲಿ ಬಂಡವಾಳ ಹಾಕುವುದು ಬಹಳ ಮುಖ್ಯ. ಕೇವಲ ಆ ಭಾಗದಲ್ಲಿ ರೈತರು ಈಗಾಗಲೇ ಬಂಡವಾಳ ಹಾಕಿದ್ದಾರೆ. ಅದು ಸಂಪೂರ್ಣವಾಗಿ ಹೋಯಿತು. ಆ ಭಾಗದಲ್ಲೂ ಕೂಡ ಬಿತ್ತನೇ ಆಗದೇ ಇರತಕ್ಕಂಥ ಭಾಗಗಳು ಅನೇಕವು ಇವೆ. ಆ ಭಾಗದಲ್ಲೂ ಕೂಡ ರೈತರಿಗೆ ಸಹಕಾರ ಸಂಘಗಳಲ್ಲಿ ಸಾಲ ಸಿಗುತ್ತಿಲ್ಲ. ಇದಕ್ಕೆ ಕಾರಣ ಏನೆಂದರೆ, ಅವರು ಹಿಂದಿನ ಬಾಕಿಯನ್ನು ತೀರಿಸಿಲ್ಲದಿರುವುದು. ಈಗ ಬರಗಾಲ ಬಂದಿದೆ. ಇಲ್ಲಿಯವರೆಗೂ ಕೂಡ ನಾವು ಬೆಳೆ ವಿಮೆ ಬಗ್ಗೆ ಚರ್ಚೆ ಮಾಡಿದ್ದೇವೆ. ಬೆಳೆ ವಿಮೆ ಇನ್ನೂ ರೈತರ ಕೈಗೆ ತಲುಪಿಲ್ಲ. ರೈತರ ಕೈಗೆ ಅದು ತಪ್ಪದೇ ಇರತಕ್ಕ ಸಂದರ್ಬದಲ್ಲಿ, ರೈತರು ಸಹಕಾರ ಸಂಘಗಳಿಗೆ ಅಥವಾ ಬ್ಯಾಂಕುಗಳಿಗೆ ಕೊಡಬೇಕಾಗಿರತಕ್ಕಂಥ ಬಾಕಿ ಏನಿದೆಯೋ, ಆ ಬಾಕಿಯನ್ನು ಕೊಡುವುದಕ್ಕೆ ರೈತರಿಗೆ ಆಗಲಿಲ್ಲ. ಈಗ ಬಿತ್ತನೆ ಮಾಡಬೇಕಾಗಿದೆ. ಬಿತ್ತನೆ ಮಾಡಲಿಕ್ಕೆ ಬಂಡವಾಳ ಎಲ್ಲಿಂದ ಬರುತ್ತದೆ? ಬಂಡವಾಳ ಬಾರದಿರುವ ಕಾರಣದಿಂದ ಬಿತ್ತನೆ ಆಗಿಲ್ಲ. ಒಂದು ವೇಳೆ ಅದೃಷ್ಟವಶಾತ್ ಮಳೆ ಬಂದರೂ ಸಹಾ ಬಿತ್ತನೆ ಮಾಡತಕ್ಕ ಪರಿಸ್ಥಿತಿಯಲ್ಲಿ ರೈತರು ಇಲ್ಲ. ಈ ಕಾರಣದಿಂದ ರೈತರಿಗೆ ನೀವು ತಕ್ಷಣವೇ ಯಾವುದಾದರೂ ರೂಪದಲ್ಲಿ ಸಾಲ

ಕೊಡಬೇಕು. ನೀವು ಡಿ.ಸಿ.ಸಿ ಬ್ಯಾಂಕುಗಳಿಗೆ ಹೇಳುತ್ತೀರೋ ಅಥವಾ ವಾಣಿಜ್ಯ ಬ್ಯಾಂಕುಗಳಿಗೆ ಹೇಳುತ್ತೀರೋ? ಅದು ನನಗೆ ಗೊತ್ತಿಲ್ಲ. ಯಾವ ರೀತಿಯಾದಂತಹ ಸೂಚನೆಯನ್ನು ಕೊಡಬೇಕೆಂಬುದು ಸರ್ಕಾರಕ್ಕೆ ಬಿಟ್ಟ ವಿಷಯವಾಗಿದೆ. ನೀವು ರೈತರಿಗೆ ಸಕಾಲದಲ್ಲಿ ಸಾಲ ಕೊಡಬೇಕಾಗಿರತಕ್ಕದ್ದು ಅತೀ ಅವಶ್ಯಕವಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿರತಕ್ಕ ಅಂಶ ಇದು. ಇದನ್ನು ಸರ್ಕಾರ ತೀವ್ರವಾಗಿ ಪರಿಶೀಲಿಸಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:- ಮಾನ್ಯ ಅಧ್ಯಕ್ಷರೇ, ನಿನ್ನೆ ನಾನು ಚರ್ಚೆಯಲ್ಲಿ ಭಾಗವಹಿಸಿದ್ದಾಗ ಒಂದು ವಿಷಯನ್ನು ಸರ್ಕಾರದ ಗಮನಕ್ಕೆ ತಂದಿದ್ದೆ. ರಾಜ್ಯ ಅಥವಾ ಕೇಂದ್ರ ಸರ್ಕಾರದ ತನ್ನ ಪಾಲಿನ ಇನ್‌ಶ್ಯೂರೆನ್ಸ್ ಹಣವನ್ನು ಬಿಡುಗಡೆ ಮಾಡಿದಾಗ, ಅವುಗಳು ಕಮರ್ಷಿಯಲ್ ಬ್ಯಾಂಕ್ ಮತ್ತು ಕೆಲವು ಕೋ-ಆಪರೇಟಿವ್ ಸೊಸೈಟಿಗಳಿಗೆ ಚೆಕ್ ರೂಪದಲ್ಲಿ ಹೋಗುತ್ತವೆ. ಆದರೆ ರೈತರಿಗೆ ಅದನ್ನು ತಿಳಿಸತಕ್ಕ ಕೆಲಸವನ್ನು ಕೃಷಿ ಇಲಾಖೆಯೂ ಸಹ ಮಾಡುತ್ತಿಲ್ಲ. ಎಲ್ಲರೂ ವಿ.ಆರ್.ಎಸ್. ತೆಗೆದುಕೊಂಡು, ಈಗ ಒಂದೊಂದು ಬ್ಯಾಂಕಿನಲ್ಲಿ 3-4 ಗುಮಾಸ್ತರನ್ನು ಬಿಟ್ಟರೆ ಅವರಲ್ಲಿ ಬೇರೆ ಸ್ಟಾಫ್ ಇಲ್ಲ. ಇದರಿಂದಾಗಿ, ಬ್ಯಾಂಕ್‌ನವರ್ಯಾರೂ ಚೆಕ್‌ಗಳನ್ನು ವಿತರಣೆ ಮಾಡಲು ಮುಂದೆ ಬರುವುದಿಲ್ಲ. ಇದು ಅವರಿಗೆ ಬೇಡವಾದಂತಹ ಕೆಲಸವಾಗಿದೆ. ಹೀಗಾಗಿ ರೈತರಿಗೆ ಇನ್‌ಶ್ಯೂರೆನ್ಸ್ ಹಣ ಬಂದಿದ್ದರೂ ಕೂಡ ಅದನ್ನು ಪಡೆದುಕೊಳ್ಳುವುದಕ್ಕೆ ಒಂದು ಸರಿಯಾದಂತಹ ವ್ಯವಸ್ಥೆ ಇಲ್ಲ. ಆದ್ದರಿಂದ ದಯವಿಟ್ಟು ಕೃಷಿ ಇಲಾಖೆ, ಈ ವಿಷಯದಲ್ಲಿ ಮಧ್ಯ ಪ್ರವೇಶಿಸಿ, ರೈತರುಗಳನ್ನು ಕಲೆಕ್ಟೀವ್ ಆಗಿ ಸೇರಿಸಿ, ಅವರಿಗೆ ಆ ಚೆಕ್ಕುಗಳನ್ನು ವಿತರಣೆ ಮಾಡಬೇಕು. ಪ್ರತಿಯೊಬ್ಬರೂ ಸಹ ಅಕೌಂಟ್ ಓಪನ್ ಮಾಡಿ ಹಣ ತೆಗೆದುಕೊಳ್ಳಬೇಕೆಂದರೆ ಕಷ್ಟವಾಗುತ್ತದೆ. 500 200 ಮತ್ತು 1000 ರೂಪಾಯಿಗಳ ಸಣ್ಣ ಮೊತ್ತದ ಇನ್‌ಶ್ಯೂರೆನ್ಸ್ ಬಂದಿರುವವರಲ್ಲಾ ಅಕೌಂಟ್ ಓಪನ್ ಮಾಡಬೇಕೆಂದರೆ, ಬ್ಯಾಂಕ್‌ನವರು ಅದಕ್ಕೂ ತೊಂದರೆ ಕೊಡುತ್ತಾರೆ. ರೈತರು ತಮಗೆ ಬಂದಿರತಕ್ಕ ಇನ್‌ಶ್ಯೂರೆನ್ಸ್ ಹಣವನ್ನು ಪಡೆದುಕೊಳ್ಳಲು ಅಷ್ಟೇ ಹಣವನ್ನು ಖರ್ಚು ಮಾಡಬೇಕಾದಂತಹ ಪರಿಸ್ಥಿತಿ ಇದೆ. ಆದ್ದರಿಂದ, ದಯವಿಟ್ಟು ಈ ವಿಷಯದಲ್ಲಿ ಸರ್ಕಾರ ಮಧ್ಯ ಪ್ರವೇಶಿಸಬೇಕೆಂದು ನಾನು ಕೋರುತ್ತೇನೆ.

4.10 ಪಿ.ಎಂ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೊಸ ಖಾತೆಯನ್ನು ವಹಿಸಿಕೊಂಡಿದ್ದಾರೆ. ಅವರು ಬಹಳ ವಿವರವಾಗಿ ಮಾತನಾಡಿ ಈ ಇಲಾಖೆಯನ್ನು ಬಹಳ ಒಳ್ಳೆಯ ಮಟ್ಟಕ್ಕೆ ತರಲಿಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂಬ ಬಗ್ಗೆ ಏನಾದರೂ ಹೇಳುತ್ತಾರೆಂದು ನಾವು ಭಾವಿಸಿದ್ದೇವು. ಅವರು ಇನ್ನೂ ಕೂಡ ಆ ಇಲಾಖೆಯ ಬಗ್ಗೆ ಅಧ್ಯಯನ ಮಾಡುವುದರಲ್ಲಿದ್ದಾರೆ. ಅಲ್ಲದೇ ಬರಗಾಲದ ಕಾಮಗಾರಿಯನ್ನು ನಿಭಾಯಿಸಲಿಕ್ಕೆ ಏನೇನು ಪ್ರಿಪೇರ್ ಮಾಡಬೇಕೆಂದು ಹೇಳುತ್ತಾರೆಂದು ಇದ್ದೆವು, ಅವರು ಏನೂ ಹೇಳಲಿಲ್ಲ. ಭತ್ತದ ಬೀಜದ ಬಗ್ಗೆ ರೈತರಿಗೆ ಯಾವ ಭತ್ತದ ಬೀಜ ಬೇಕು ಅದನ್ನು ಬಿಡುಗಡೆ ಮಾಡಲಿಲ್ಲ. ಕೆಲವು ಕಡೆ ರೈತ ಮಾಹಿತಿ ಕೇಂದ್ರಗಳಲ್ಲಿ ಕೆಲವು ಭತ್ತದ ಬೀಜಗಳಿವೆ. ತಡವಾಗಿ ಮಳೆಯಾಗಿರುವುದರಿಂದ ಈ ಸಂತರದಲ್ಲಿ ನಾವು ಬೀಜ ಹಾಕಲಿಕ್ಕೆ ಯಾವ ಬೀಜ ಬೇಕು ಅದನ್ನು ಪರ್ಯಾಯವಾಗಿ ಬೀಜವನ್ನು ಅಲ್ಲಿ ಇಡುವ ವ್ಯವಸ್ಥೆಯನ್ನು ಮಾಡಲಿಲ್ಲ. ಭತ್ತದ ಬೀಜಕ್ಕೆ 50 ಪರ್ಸೆಂಟ್ ಸಹಾಯಧನ ಏನು

ಕೊಟ್ಟಿದ್ದೀರಿ. ಅದರ ಬದಲು ಸ್ಥಳೀಯವಾಗಿ ರೈತರ ಹತ್ತಿರ ಏನು ಬೀಜ ಇದೆ ಅದನ್ನು ಕೊಡುವುದಕ್ಕೆ ಆರಂಭ ಮಾಡಿ, ಬೇರೆ ಬೇರೆ ದೊಡ್ಡ ದೊಡ್ಡ ಕಂಪನಿಗಳಿಗೆ ಅನಾವಶ್ಯಕವಾಗಿ ಹಣ ಸುರಿದು ಪೋಲು ಮಾಡುವುದು ಬೇಡ ಎಂದು ಹೇಳಿದೆ. ಅವರು ಅದರ ಬಗ್ಗೆ ಏನೂ ಹೇಳಲಿಲ್ಲ. ನಾನು ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ರೈತರ ಮನೆ ಮನೆಗೆ ಹೋಗಿ ಮಾಹಿತಿಯನ್ನು ಕೊಡಬೇಕೆಂದು ಸೂಚನೆ ಕೊಟ್ಟಿದ್ದೇನೆ ಎಂದು ಹೇಳಿದಿರಿ, ಈ ಸೂಚನೆ ಪಾಲನೆ ಮಾಡುವುದಕ್ಕೆ ಬೇಕಾದ ಸಿಬ್ಬಂದಿ ಇಲ್ಲ. ಕೃಷಿ ಸಹಾಯಕರು ನಿಮ್ಮ ಊರಿನಲ್ಲಿ, ನಮ್ಮ ಊರಿನಲ್ಲಿ ಬರುತ್ತಿಲ್ಲ. ಅವರು ಇಲ್ಲವೇ ಇಲ್ಲ. ಕೃಷಿ ಸಹಾಯಕರ ರೆಕ್ರ್ಯೂಟ್‌ಮೆಂಟ್ ಆಗಿ ಎಷ್ಟು ವರ್ಷವಾಯಿತು? ಅವರಿಗೆ ಈಗ ಪ್ರಮೋಷನ್ ಆಗಿ ಎಇಓಗಳಾಗಿದ್ದಾರೆ. ಕೃಷಿ ಸಹಾಯಕರು ಯಾರೂ ಇಲ್ಲ. ನೀವು ಇವತ್ತು ಹೇಳುತ್ತಿರುವುದು ಭಾಷಣಕ್ಕೆ ಅಷ್ಟೇ ಹೇಳಬೇಕೇ ವಿನಃ ಅಲ್ಲಿ ಕೆಲಸ ಮಾಡುವುದಕ್ಕೆ ನಿಮ್ಮ ಸೂಚನೆಯನ್ನು ಪಾಲನೆ ಮಾಡುವುದಕ್ಕೆ ಯಾರೂ ಇಲ್ಲ. ಇವರ ರೆಕ್ರೂಟ್‌ಮೆಂಟ್ ಯಾವಾಗ ಮಾಡುತ್ತೀರಿ? ರೈತರಿಗ ಬೇಕಾಗುವಷ್ಟು ರೆಕ್ರ್ಯೂಟ್‌ಮೆಂಟ್ ಆಗುತ್ತದಾ? ರೈತರಿಗೆ ಮಾಹಿತಿ ಕೊಡುವ ಇಲಾಖೆ ಬಹಳ ಅಗತ್ಯವಾದ ಇಲಾಖೆ. ಯಾವ ಬೆಳೆ ಬೆಳೆಯಬೇಕು? ಮಾನ್‌ಸೂನ್‌ನಲ್ಲಿ ಯಾವ್ಯಾವ ಬೆಳೆ ಹೇಗೆ ಆಗುತ್ತದೆ? ಇವೆಲ್ಲಾ ಮಾಹಿತಿ ಕೊಡಬೇಕಾಗಿದೆ. ಭತ್ತ ಬೆಳೆಯುವ ರೈತರು ಭತ್ತ ಬೆಳೆಯುವುದರೊಂದಿಗೆ ಬೇರೆ ಬೇರೆ ಪರ್ಯಾಯ ಬೆಳೆಯನ್ನು ಬೆಳೆಯುವುದಕ್ಕೆ ಹೊರಟ್ಟಿದ್ದಾರೆ. ಅವರಿಗೆ ಸರಿಯಾದ ಮಾಹಿತಿ ನೀಡಿ ಆ ರೀತಿ ತರಬೇತಿ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ ಎಂದು ಕೇಳಬೇಕಾಗಿದೆ. ಮೇ ತಿಂಗಳಲ್ಲಿ ಕೇಂದ್ರ ಸರ್ಕಾರ ಬೆಳೆ ವಿಮಾ ಹಣವನ್ನು ರಿಲೀಸ್ ಮಾಡಿದ್ದರೂ ಕೂಡ ನೀವು ಇನ್ನೂ ಹಣವನ್ನು ರಿಲೀಸ್ ಮಾಡುವುದರಲ್ಲಿದ್ದೀರಿ. ಇದು ನಿಮ್ಮ ಸರ್ಕಾರದ ನೇರವಾದ ವೈಫಲ್ಯತೆ. ಬರ ಕಾಮಗಾರಿಗೋಸ್ಕರ ಕೊಟ್ಟಿರತಕ್ಕಂತಹ ಅಕ್ಕಿ ನಿಮಗೆ ಬರುತ್ತದೆ. ಇದು ರೆವಿನ್ಯೂ ಮಂತ್ರಿಗಳಿಗೆ ಬರುತ್ತದೆಯೋ ಏನೋ ಗೊತ್ತಿಲ್ಲ. ನಿನ್ನೆ ಮೊನ್ನೆ ಟೆಲಿವಿಷನ್‌ನಲ್ಲಿ ತೋರಿಸುತ್ತಿದ್ದರು. ಬಾಗಲಕೋಟೆಯಲ್ಲಿ ಮತ್ತು ಹಳ್ಳಿ ಹಳ್ಳಿಗಳಲ್ಲಿ ಲೋಡ್‌ಗಟ್ಟಲೆ ಅಕ್ಕಿಯ ಮೂಟೆಯನ್ನು ತೆಗೆದುಕೊಂಡು ಹೋಗಿ ಹೊರಗೆ ಎಸೆದು ಊರಿನಲ್ಲಿ ಗಬ್ಬುನಾತ ಹೊರಡಿದೆ. ಕೇಂದ್ರದಿಂದ ಕೊಟ್ಟಿರತಕ್ಕಂತಹ ಅಕ್ಕಿಯನ್ನು ಸರಿಯಾದ ರೀತಿಯಲ್ಲಿ ಬಳಸುತ್ತಿಲ್ಲ. ಬಾಗಲಕೋಟೆಯ ಜೊತೆಗೆ ಎಲ್ಲಾ ಊರುಗಳಲ್ಲಿ ಈ ರೀತಿ ಆಗಿದೆ. ಅಕ್ಕಿಯನ್ನು ಸರಿಯಾಗಿ ಯುಟಿಲೈಸ್ ಮಾಡಿಲ್ಲ ಎಂದರೆ ಇದು ಸರ್ಕಾರದ ವಿಫಲತೆಯನ್ನು ಎತ್ತಿ ತೋರಿಸುತ್ತದೆ. ಲಕ್ಷಗಟ್ಟಲೆ ಕ್ವಿಂಟಾಲ್ ಅಕ್ಕಿಯನ್ನು ತಂದು, ಮಳೆ ಹೋಗಿ ಹಳ್ಳಿ ಹಳ್ಳಿಯಲ್ಲಿ ಕೃಷಿ ಕಾರ್ಮಿಕರಿಗೆ ಕೆಲಸ ಇಲ್ಲ. ಅವರಿಗೆ ಅದನ್ನು ಕೊಡುವುದು. ನಿಮಗೆ ಅದೇ ಕೆಲಸ ಬರುತ್ತದೆ. ಮುಂದಿನ ಸಾರಿ ಕೃಷಿ ಕಾರ್ಮಿಕರ ಕೈಗೆ ಕೆಲಸ ಕೊಡತಕ್ಕಂಥದ್ದು ಆಗುತ್ತದೆ. ನೀರನ್ನು ಹಿಂಗಿಸಲಿಕ್ಕೆ ಬೇಕಾಗಿರತಕ್ಕಂತಹ ವ್ಯವಸ್ಥೆಯನ್ನು ನೀವು ಮಾಡಿಸಬಹುದಾಗಿತ್ತು. ನಿಮ್ಮ ಸರ್ಕಾರಕ್ಕೆ ಮನಸ್ಸು ಇಲ್ಲ. ಕೃಷಿ ಕಾರ್ಮಿಕರು ಬಳಸಿಕೊಳ್ಳಲಿಕ್ಕೆ ಕೊಟ್ಟಿರತಕ್ಕಂತಹ ಅಕ್ಕಿಯನ್ನು ತೆಗೆದುಕೊಂಡು ಹೋಗಿ ಚರಂಡಿಗೆ ಎಸೆಯುತ್ತೀರಿ ಎಂದರೆ ಇದನ್ನು ಯಾವ ಶಬ್ದದಲ್ಲಿ ಹೇಳಬೇಕು. ಎನ್ನುವುದು ನನಗೆ ಗೊತ್ತಿಲ್ಲ. ಅಕ್ಕಿ ಸದಳಕ್ಕೆ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಾ? ಇದನ್ನು ದಯಮಾಡಿ ಹೇಳಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ವಿ.ಎಸ್. ಕೌಜಲಗಿ:- ನೀವು ಹೇಗೆ ಮಾಡುತ್ತೀರೋ? ನಿಮ್ಮಲ್ಲಿ ರೆಕ್ರೂಟ್‌ಮೆಂಟ್ ಇಲ್ಲ, ಅದು ಇದು, ಸರ್ಕಾರದ ಕೆಲಸ ಎಂದು ಹೇಳಿದಿರಿ. ನಾನು ನಿಮಗೆ ಆಶ್ವಾಸನೆ ಕೊಟ್ಟಿದ್ದೇನೆ.

ರೈತರ ಮನೆ ಮನೆಗೆ ಹೋಗಿ ಅದರ ಬಗ್ಗೆ ಪ್ರಚಾರ ಮಾಡುವ ಕೆಲಸ ಮಾಡುತ್ತೇವೆ. ಯಾವ ರೀತಿ ಮಾಡಬೇಕು ಎಂದು ಅದನ್ನು ನಮಗೆ ಬಿಟ್ಟರೆ ನಾವು ಮಾಡುತ್ತೇವೆ. ಅಕ್ಕಿ ಬೆಲೆ ಸುಮಾರು 1200 ರಿಂದ 1400 ರೂಪಾಯಿಗಳವರೆಗೆ ಇತ್ತು. ನಂತರ ಈಗ 952.39 ಪೈಸೆ ಆಯಿತು. ನಾವು ಬೀಜ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ತಾವು ಬರಗಾಲ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈ ಚರ್ಚೆ ಆರಂಭ ಎಂದಿದ್ದರಿಂದ ನಾನು ತಯಾರು ಮಾಡಿಕೊಂಡು ಬಂದಿದ್ದೇನೆ. ಬಜೆಟ್ ಬಂದಾಗ ಪೂರ್ಣ ಅಖಾಡದಲ್ಲಿ ನಾನು ತಯಾರಿದ್ದೇನೆ. ನೀವೂ ತಯಾರಾಗಿ.

ಶ್ರೀ ಜಗದೀಶ್ ಶೆಟ್ಟರ್:- ಸಾಲ ವಸೂಲಾತಿ ಬಗ್ಗೆ ಏನು ಮಾಡಿದಿರಿ?

ಶ್ರೀ ಸಿ. ಭೈರೇಗೌಡ:- ಮಾನ್ಯ ಕೌಜಲಗಿಯವರು ಇಂತಹ ಉತ್ತರ ಕೊಟ್ಟರೆ ನಾವು ಹೇಗೆ ಸುಮ್ಮನೆ ಕೂರುವುದು ಹೇಳಿ. ಬೆಳೆ ಆಗಬೇಕಾಗಿದೆ. ರೈತರ ಕೈಯಲ್ಲಿ ಬಂಡವಾಳ ಇಲ್ಲ. ಬಂಡವಾಳ ಕೊಡಿಸತಕ್ಕಂತಹ ವ್ಯವಸ್ಥೆ ಮಾಡಿ ಎಂದರೆ, ಅದಕ್ಕೆ ಉತ್ತರ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರೆ ಹೇಗೆ?

ಶ್ರೀ ಎ.ಎಸ್. ಕೌಜಲಗಿ:- ಮಾನ್ಯ ಕಂದಾಯ ಸಚಿವರು ಬಂದು ಉತ್ತರ ಕೊಡುತ್ತಾರೆ.

ಅಧ್ಯಕ್ಷರು:- ಮೇಲ್ಮನೆಯಲ್ಲಿ ಅವರು ಉತ್ತರ ಕೊಡುತ್ತಿದ್ದಾರೆ. ಆದಾದನಂತರ ಬರುತ್ತಾರೆ.

ಶ್ರೀ ಸಿ. ಭೈರೇಗೌಡ:- ಹಾಗಾದರೆ ಈ ಸದನವನ್ನು ಅಡ್ಜರ್ನ್ ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಸಹಕಾರಿ ಸಚಿವರು ಸಹ ಇಲ್ಲಿ ಇರಬೇಕಾಗುತ್ತದೆ. ಸಹಕಾರಿ ಸಚಿವರ ಅಸಹಕಾರ ಈ ಸದನಕ್ಕೆ ಇದ್ದ ಹಾಗೆ ಇದೆ. ಕಳೆದ ನಾಲ್ಕು ದಿನಗಳಿಂದ ಅವರು ಇಲ್ಲ.

ಅಧ್ಯಕ್ಷರು:- ಬರ ಮತ್ತು ಕೃಷಿ ಬಗ್ಗೆ ಯಾರ್‍ಯಾರು ಮಾತನಾಡಿದ್ದಾರೆ. ಅವರಿಗೆ ಉತ್ತರ ಕೊಡುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಸಾಲ ವಸೂಲಾತಿ ನಿಲ್ಲಿಸುವುದ್ಧಕೆ ಸಾಲವನ್ನು ಪರಿವರ್ತಿಸಿ ಕೊಡುವುದರ ಬಗ್ಗೆ ಮಾನ್ಯ ಸಹಕಾರಿ ಸಚಿವರ ನಿರ್ದೇಶನ ಬೇಕಾಗುತ್ತದೆ. ಮಾನ್ಯ ಕೃಷಿ ಸಚಿವರು ಮತ್ತು ಮಾನ್ಯ ತೋಟಗಾರಿಕೆ ಸಚಿವರನ್ನು ಕೇಳುವುದು ಸರಿ ಅಲ್ಲ. ರೈತರಿಗೆ ಸಹಕಾರಿ ಸಂಘಗಳ ಮೂಲಕ ಅನೇಕ ಸಹಾಯ ಸಿಗಬೇಕಾಗಿದೆ. ಸಹಕಾರಿ ಸಚಿವರು ಅನೇಕ ಜವಾಬ್ದಾರಿಗಳನ್ನು ತೆಗೆದುಕೊಳ್ಳಬೇಕಾಗಿದೆ. ಸಾಲ ವಸೂಲಾತಿ ಇದೆ. ಸಾಲದ ಮೇಲೆ ಬಡ್ಡಿ ಮನ್ನಾ ಮಾಡುವುದು ಇದೆ. ಸಹಕಾರಿ ಸಚಿವರು ಇಲ್ಲ. ಅವರು ತಮಗೆ ಆರೋಗ್ಯ ಸರಿ ಇಲ್ಲವೆಂದು ತಿಳಿಸಿದ್ದಾರೆಂದು ಹೇಳಿದಿರಿ.

ಶ್ರೀ ಅಪ್ಪಾಜಿ ಎಸ್. ನಾಡಗೌಡ(ಸಚೇತಕರು):- ಮಾನ್ಯ ಸಹಕಾರ ಸಚಿವರು ಈ ತಿಂಗಳ 12ನೇ ತಾರೀಖಿನವರೆಗೆ ಅನುಮತಿ ಕೋರಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್:-ಮಾನ್ಯ ಸಹಕಾರಿ ಸಚಿವರು, ಮಾನ್ಯ ರೆವಿನ್ಯೂ ಸಚಿವರು ಇಬ್ಬರೂ ಇದ್ದಾರೆ. ಸಚಿವರು ತಯಾರಾಗಿ ಬರಬೇಕು. ಅವರು ಸದನದಲ್ಲಿದ್ದಾರೆ.

ಇಬ್ಬರೂ ಅನುಭವಿಗಳು. ಅವರು ತಯಾರಾಗಿ ಬರಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ತಾವು ಸರ್ಕಾರಕ್ಕೆ ಛೀಮಾರಿ ಹಾಕಬೇಕಾಗುತ್ತದೆ. ರೆವಿನ್ಯೂ ಸಚಿವರೂ ಇದ್ದಾರೆ, ಸಹಕಾರಿ ಸಚಿವರೂ ಇದ್ದಾರೆ. ನಾನು ನಮ್ಮ ಕೃಷಿ ಸಚಿವರಿಂದ ಬಹಳ ನಿರೀಕ್ಷೆ ಮಾಡಿದ್ದೆ. ಒಬ್ಬ ಹಿರಿಯರು, ಬಹಳ ಅನುಭವೀಕರು, ರೈತ ಕುಟುಂಬದಿಂದ ಬಂದವರು, ಅವರು ಮೊದಲು ಉತ್ತರ ಹೇಳಿದ ಧಾಟಿ ನೋಡಿದರೆ ಬಹಳ ವಿವರವಾಗಿ ಹೇಳುತ್ತಾರೆಂದು ತಿಳಿದುಕೊಂಡಿದ್ದೆ. ಕಾವೇರಿಯಿಂದ ಗೋದಾವರಿವರೆಗೆ ಬಂದು ಎರಡು ಪದ ಹೇಳಿ ಕುಳಿತು ಬಿಟ್ಟರು. ಇಲ್ಲಿ ಮೋಸವಾಗಿದೆ. ಇದಕ್ಕೆ ಉತ್ತರ ಕೊಡಬೇಕೆಂದು ಹೇಳಿದೆ. ರೈತರಿಗೆ ಮೋಸ ಎಲ್ಲಿ ಆಗಿದೆ ಎಂದು ಹೇಳಿದ್ದೇನೆ.

ಶ್ರೀ ವಿ.ಎಸ್. ಕೌಜಲಗಿ:- ನೀವು ಹತ್ತು ಸಾವಿರ ಕೋಟಿ ರೂಪಾಯಿಗಳು ಎಂದು ಹೇಳಿಬಿಟ್ಟರೆ ನಾನು ಒಪ್ಪಿಕೊಳ್ಳಬೇಕಲ್ಲಾ, ವೈಜ್ಞಾನಿಕ ಆಧಾರದ ಮೇಲೆ 132 ಕೋಟಿ ರೂಪಾಯಿಗಳನ್ನು ನಾವು ಕೊಡಬೇಕಾಗಿದೆ.

ಶ್ರೀ ಎಸ್.ಎಸ್ ಪಾಟೀಲ್:- ಹಾಗಾದರೆ ತ್ರೆಶ್ ಹೋಲ್ಡ್‌ಯೀಲ್ಡ್ ಹೇಗೆ ಮಾಡಿದ್ದೀರಿ ಎಂಬ ಬಗ್ಗೆ ನಾನು ಕೇಳಿದೆನಲ್ಲಾ.

ಶ್ರೀ ವಿ.ಎಸ್. ಕೌಜಲಗಿ:- ನಾನು ಹೇಳಿದ್ದೇನಲ್ಲಾ, ಅದರ ಬಗ್ಗೆಯೂ ವಿವರ ಕೊಟ್ಟಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್:- ಎಲ್ಲಿ ಹೇಳಿದಿರಿ? ಅದನ್ನು ಹೇಳಿಬಿಡ್ರಿ, ಹೋಬಳಿವೈಸ್ ತ್ರೆಶ್ ಹೋಲ್ಡ್‌ಯೀಲ್ಡ್ ಏನಾಯಿತು? ಯಾವ ಬೆಳೆ ಎಂಬ ಬಗ್ಗೆ ಹೇಳಿ.

ಶ್ರೀ ವಿ.ಎಸ್. ಕೌಜಲಗಿ:- ನೋಡಿ ಪಾಟೀಲರೆ, ನಿಮ್ಮ ಪ್ರಶ್ನೆ ನನಗೂ ಅರ್ಥವಾಗಿದೆ, ನಿಮಗೆ ಹೋಬಳಿವೈಸ್ ವಿವರ ಬೇಕು ಎಂದರೆ ಈ ಪುಸ್ತಕವನ್ನು ನಿಮಗೆ ಕೊಡುತ್ತೇನೆ. ತಕ್ಷಣ ಉತ್ತರ ಬೇಕು ಎಂದು ಇಷ್ಟೆಲ್ಲವನ್ನು ಇಲ್ಲಿ ಓದುವುದಕ್ಕಾಗುತ್ತದೆಯೇ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:- ಮಾನ್ಯ ಅಧ್ಯಕ್ಷರೆ, ಅಲ್ಲೇನಾಗಿದೆ ಎಂದರೆ, ಇವರು ಕಳೆದ ಐದು ವರ್ಷಗಳ ಆ್ಯವರೇಜ್ ತೆಗೆದುಕೊಳ್ಳುತ್ತಾರಲ್ಲಾ ಆ ಐದು ವರ್ಷಗಳಲ್ಲಿ ಫಸಲು ರಾಜ್ಯಾದ್ಯಂತ ಅಷ್ಟೇನೂ ಚೆನ್ನಾಗಿ ಆಗಿಲ್ಲ. ಆ ಆ್ಯವರೇಜ್‌ನ್ನು ತೆಗೆದುಕೊಂಡರೆ ಈ ಸಾರಿಯೂ ರೈತರಿಗೆ ಇನ್‌ಶ್ಯೂರೆನ್ಸ್ ಹಣ ಬರುವುದಕ್ಕೆ ಅವಕಾಶವೇ ಆಗುವುದಿಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ:- ಮಾನ್ಯ ಅಧ್ಯಕ್ಷರೆ, ಒಂದಲ್ಲ, ಎರಡಲ್ಲ, ಪ್ರತಿ ಕರ್ನಾಟಕದಲ್ಲಿ ರಾಜ್ಯದಲ್ಲಿ ಯಾವುದಾದರೂ ಒಂದು ಭಾಗಕ್ಕೆ ಕ್ಷಾಮ ಬರುತ್ತಲೇ ಇದೆ. ಆ ಕ್ಷಾಮ ಬಂದಾಗ ನಾವು ಇಲ್ಲಿ ಸೇರಿಕೊಂಡು ಕೂಗಾಡುವುದು, ಆಗ ಒಂದಿಷ್ಟು ಅನ್ನವನ್ನು, ನೀರನ್ನು ಕೊಟ್ಟು ರೈತರಿಗೆ ಸಾಯದೇ ಇರುವ ಹಾಗೆ ಮಾಡಿ ಬಿಡುವುದು ಇದೇ ಪರಿಸ್ಥಿತಿ ಅನೇಕ ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಪ್ರತಿ ಸಾರಿಯೂ ಒಬ್ಬರ ಒಬ್ಬರು ಶಾಸಕರು ಈ ಬಗ್ಗೆ ಶಾಶ್ವತವಾದ ಪರಿಹಾರಕ್ಕಾಗಿ ಏನಾದರೂ ವ್ಯವಸ್ಥೆ ಮಾಡಿ ಎಂದು ಸರ್ಕಾರಕ್ಕೆ ಹೇಳುತ್ತಲೇ ಇರುತ್ತಾರೆ. ಪ್ರತಿ ವರ್ಷವೂ ಡೆವೆಲಪ್‌ಮೆಂಟ್‌ಗೆ ಖರ್ಚಾಗತಕ್ಕಂಥ ಹಣ ಈ ರಿಲೀಫ್ ವರ್ಕ್‌ಗೆ ಹೋಗುವುದರಿಂದ ರಾಜ್ಯದ ಅಭಿವೃದ್ಧಿ ಕುಂಠಿತವಾಗುತ್ತದೆ ಎಂದುನಾವು ಪದೇ ಪದೇ ಹೇಳುತ್ತಲೇ ಬಂದಿದ್ದೇವೆ. ನಾನು ಮೊನ್ನೆ ದಿವಸ ಮಾತನಾಡುವಾಗಲೂ ಕೂಡ ಇದನೇ

ಮಾತಾನಾಡಿದ್ದೇನೆ. ಇದಕ್ಕೆ ಸರ್ಕಾರ ವಿವರಣೆ ಕೊಡಬೇಕು. ಆ ಭಾಗದ ಜನರು ಹೇಗೆ ಕೊನೆಯವರೆವಿಗೂ ತಲತಲಾಂತರಕ್ಕೂ ಶಾಶ್ವತವಾಗಿ ಈ ಕ್ಷಾಮದಲ್ಲಿಯೇ ಸೇರಿಕೊಂಡು ಬಡವರಾಗಿ ನೊಂದು ಬಳಲಿ ಸಾಯಬೇಕು ಎನ್ನುವುದು ಸರ್ಕಾರದ ಉದ್ದೇಶ ಎಂದು ಹೇಳಿದರೆ ನನ್ನದೇನೂ ಅಭ್ಯಂತರವಿಲ್ಲ, ಹಾಗಲ್ಲದೆ, ಅವರೂ ಕೂಡ ನ್ಯಾಯವಾಗಿ ಬಾಳಿ ಬದುಕಬೇಕು ಎನ್ನುವುದು ಸರ್ಕಾರದ ಉದ್ದೇಶವಾದರೆ ಈ ಬಗ್ಗೆ ಬೇರೆ ಜನರ ಹಾಗೆ ಒಂದು ಶಾಶ್ವತವಾದ ಪರಿಹಾರವನ್ನು ಕಂಡುಹಿಡಿದು ಅದಕ್ಕೆ ಬೇಕಾದಂಥ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಈಗ ಶಾಶ್ವತವಾದ ಪರಿಹಾರ ನಿಧಿಯನ್ನು ಸ್ಥಾಪನೆ ಮಾಡಿ ಅಥವಾ ಒಂದು ಪರ್ಮನೆಂಟ್ ಬೋರ್ಡ್‌ನ್ನು ಮಾಡಿ ಅದರಲ್ಲಿ ತಜ್ಞರನ್ನು ಹಾಕಿ ರಾಜ್ಯದಲ್ಲಿ ಯಾವ್ಯಾವ ಭಾಗದಲ್ಲಿ ಆಗಾಗ್ಗೆ ಕ್ಷಾಮ ಬರುತ್ತದೆ ಮತ್ತು ಆಗ ಅಲ್ಲಿ ಯಾವ ರೀತಿಯಲ್ಲಿ ಜನರನ್ನು ಕ್ಷಾಮದ ದವಡೆಯಿಂದ ಬಿಡುಗಡೆ ಮಾಡಬೇಕು ಎನ್ನುವುದರ ಬಗ್ಗೆ ಅಧ್ಯಯನ ಮಾಡಿ ಅದಕ್ಕೆ ಶಾಶ್ವತವಾದ ಕಾರ್ಯಕ್ರಮವನ್ನೇ ರೂಪಿಸಬೇಕಾದ ಅವಶ್ಯಕತೆ ಇದೆ.

ಅಧ್ಯಕ್ಷರು:- ಮಾನ್ಯ ಹನುಮೇಗೌಡರೆ, ಬರಗಾಲ ಮತ್ತು ಕ್ಷಾಮದ ಬಗ್ಗೆ ಮಾನ್ಯ ಶ್ರೀ ಕಂಠಯ್ಯನವರು ಬಂದು ಉತ್ತರ ಕೊಡುತ್ತಾರೆ. ನೀವು ಬೆಳೆ ವಿಮೆ ಪರಿಹಾರದ ಬಗ್ಗೆ ಮಾತ್ರ ಮಾತನಾಡಿ. ಮಾನ್ಯ ಶ್ರೀ ಕಂಠಯ್ಯನವರು ಬರಗಾಲದ ಬಗ್ಗೆ ಆ ಹೌಸ್‌ನಲ್ಲಿ ಉತ್ತರ ಕೊಡುತ್ತಿದ್ದಾರೆ. ಅವರು ಇಲ್ಲಿಗೆ ಬಂದು ಉತ್ತರ ಕೊಡುತ್ತಾರೆ.

ಶ್ರೀ ಕೆ.ಹೆಚ್. ಹನುಮೇಗೌಡ:- ಮಾನ್ಯ ಅಧ್ಯಕ್ಷರೆ, ನಾನು ಇನ್ನೊಂದು ವಿಚಾರವನ್ನು ಹೇಳಿದ ನಂತರ ಇದನ್ನು ಇಲ್ಲಿಗೇ ಬಿಟ್ಟುಬಿಡುತ್ತೇನೆ. ಉತ್ತರ ಕರ್ನಾಟಕದಲ್ಲಿ ನೀರಾವರಿ ಯೋಜನೆಯಲ್ಲಿ ಬಿದ್ದಂಥ ಮಳೆಯನ್ನು ಸರಿಯಾಗಿ ಉಪಯೋಗಿಸಿಕೊಂಡರೆ ಅಲ್ಲಿನ ಹೆಚ್ಚು ಭಾಗದಲ್ಲಿ ಈ ಕ್ಷಾಮದ ದವಡೆಯಿಂದ ಹೆಚ್ಚು ಜನರನ್ನು ಬಿಡುಗಡೆ ಮಾಡಬಹುದು. ಮಾನ್ಯ ಹೆಚ್.ಕೆ. ಪಾಟೀಲರು ನೀರಾವರಿ ಮಂತ್ರಿಗಳಾದ ಮೇಲೆ ಕೃಷ್ಣಾ ಬೇಸಿನ್‌ನಲ್ಲಿ ಬರತಕ್ಕಂಥ ಜಲಾನಯನ ಪ್ರದೇಶಗಳಿಗಾಗಿ ನೀರು ಸಂಗ್ರಹಿಸಲು ಕೃಷ್ಣಾ ಜಲ ಭಾಗ್ಯ ನಿಗಮ ಎಂದು ಮಾಡಿ ಬಾಂಡ್‌ಗಳನ್ನು ಎತ್ತಿ ಆ ವರ್ಕ್‌ಗಳನ್ನು ಸ್ವಲ್ಪ ಹೆಚ್ಚು ಕಡಿಮೆ ಕಂಪ್ಲೀಟ್ ಮಾಡಿದರು. ಈಗ ಕಾವೇರಿ ಜಲಾನಯಮ ಪ್ರದೇಶಗಳಲ್ಲಿ ಪ್ರಾಜೆಕ್ಟ್‌ಗಳು ಅರ್ಧಂಬರ್ಧ ಆಗಿವೆ. ಹತ್ತಾರು ವರ್ಷಗಳಾಗಿ ಹೋಗಿವೆ, ಆ ಹಣಕ್ಕೆ ಬಡ್ಡಿಯೂ ಇಲ್ಲ, ಇದಲ್ಲದೇ ಅದಕ್ಕಾಗಿ ಪ್ರತಿ ವರ್ಷ ಹೆಚ್ಚು ಹೆಚ್ಚು ಹಣ ವೆಚ್ಚವಾಗಿ ಹೋಗುತ್ತಲೇ ಇದೆ. ಇವತ್ತಲ್ಲ ನಾಳೆ ಆ ಯೋಜನೆಗಳನ್ನು ಮುಗಿಸಲೇಬೇಕಲ್ಲವೇ? ಆದ್ದರಿಂದ ಇಲ್ಲಿಯೂ ಕೂಡ ಕಾವೇರಿ ಜಲ ಭಾಗ್ಯ ನಿಗಮವನ್ನು ರಚನೆ ಮಾಡಿ, ಇಲ್ಲೂ ಕೂಡ ಆ ಕೆಲಸಗಳನ್ನು ಇನ್ನೂ ಎರಡೂ ಮೂರು ವರ್ಷಗಳಲ್ಲಿ ಮುಗಿಸಿದರೆ ಸ್ವಲ್ಪ ಹೆಚ್ಚು ಕಡಿಮೆ ಕರ್ನಾಟಕದ ಮುಕ್ಕಾಲು ಭಾಗದಲ್ಲಿ ಶಾಶ್ವತವಾದ ಪರಿಹಾರವನ್ನು ಕೊಟ್ಟಂತಾಗುತ್ತದೆ. ದಯಮಾಡಿ ಸರ್ಕಾರ ಅದರ ಬಗ್ಗೆ ಯೋಚನೆ ಮಾಡಿ ಈ ಕಾವೇರಿ ಜಲ ಭಾಗ್ಯ ನಿಗಮವನ್ನು ಮಾಡಿ, ಬಾಂಡ್‌ಗಳನ್ನು ಬಿಡುಗಡೆ ಮಾಡಿ, ಹಣವನ್ನು ಸಾಲದ ರೂಪದಲ್ಲಿ ಎತ್ತಿ ಒಂದು ಟೈಮ್-ಬಾಂಡ್ ಪ್ರೋಗ್ರಾಂ ಹಾಕಿಕೊಂಡು ಈ ಕಾವೇರಿ ಬೇಸಿನ್‌ನಲ್ಲಿ ಅರ್ಧಂಬರ್ಧ ಆಗಿ ಉಳಿದಿರತಕ್ಕಂಥ ಪ್ರಾಜೆಕ್ಟ್ ವರ್ಕ್‌ಗಳನ್ನು ಕಂಪ್ಲೀಟ್ ಮಾಡಬೇಕು. ಉದಾಹರಣೆಗೆ ನಿಮಗೆ ಹೇಳಬೇಕೆಂದರೆ, ಯಗಚಿ ಪ್ರಾಜೆಕ್ಟ್‌ನಲ್ಲಿ ಡ್ಯಾಮ್ ಆಗಿ ಎಲ್ಲವೂ ಆಗಿದೆ. ಆದರೆ

ಕಾಲುವೆ ತೋಡುವುದಕ್ಕೆ ದುಡ್ಡಿಲ್ಲದೇ ಕೆಲಸಗಳೆಲ್ಲಾ ನಿಂತುಹೋಗಿದೆ. ಇದು ಆಗಿ ಈಗಾಗಲೇ ಎರಡು ವರ್ಷಗಳಾಯಿತು ಈಗ ಇವರು ಕೊಡುತ್ತಾ ಇರತಕ್ಕಂಥ ಲೆಕ್ಕದಲ್ಲಿ ಕನಿಷ್ಟ ಪಕ್ಷ ಇನ್ನೂ ಹತ್ತು ವರ್ಷಗಳು ಬೇಕಾಗುತ್ತದೆ. ಈ ಹತ್ತು ವರ್ಷಗಳೊಳಗೆ ಈಗಾಗಲೇ ಹಾಕಿರುವ ದುಡ್ಡಿಗೆ ಬಡ್ಡಿ ಎಷ್ಟಾಗುತ್ತದೆ ಸ್ವಾಮಿ? ಆ ಹತ್ತು ವರ್ಷಗಳಲ್ಲಿ ಈ ನೀರನ್ನು ರೈತ ಉಪಯೋಗಿಸಿಕೊಂಡಿದ್ದರೆ ಎಷ್ಟು ಬೆಳೆ ಉತ್ಪತ್ತಿ ಮಾಡುತ್ತಾ ಇದ್ದರು? ಇದರಿಂದ ರಾಜ್ಯಕ್ಕೆ ಎಷ್ಟು ಹೆಚ್ಚು ತೆರಿಗೆ ಬರುತ್ತಿತ್ತು? ಇಷ್ಟು ಟರ್ನ್‌ಓವರ್ ಆಗುತ್ತಿತ್ತು? ರೈತರು ಎಷ್ಟರಮಟ್ಟಿಗೆ ಹಣವಂತರಾಗುತ್ತಿದ್ದರು ಎಂಬುದನ್ನೆಲ್ಲಾ ಯೋಚನೆ ಮಾಡಿ ನೋಡಿ. ದಯವಿಟ್ಟು ರಾಜ್ಯ ಸರ್ಕಾರ ಕಾವೇರಿ ಜಲ ಭಾಗ್ಯ ನಿಗಮದ ರಚನೆ ಮಾಡಿ ಅರ್ಧಂಬರ್ಧ ಆಗಿ ನಿಂತಿರುವ ಪ್ರಾಜೆಕ್ಟ್ ಕೆಲಸಗಳನ್ನು ಇನ್ನು ಎರಡುಮೂರು ವರ್ಷಗಳಲ್ಲಿ ಮುಗಿಸಬೇಕೆಂದು ರಾಜ್ಯ ಸರ್ಕಾರವನ್ನು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ಮಾನ್ಯ ಅಧ್ಯಕ್ಷರೆ, ಈಗ ಬರ ಎನ್ನುವ ಬಗ್ಗೆ ಇದುವರೆಗೆ ಆಯಾಯ ಡಿಸ್ಟ್ರಿಕ್‌ಗಳಲ್ಲಿ ಅಣೇವಾರಿ ಲೆಕ್ಕದಲ್ಲಿ ಅಳತೆ ಮಾಡುತ್ತಾ ಬಂದಿದ್ದಾರೆ. ಆರಾಣೆ, ನಾಲ್ಕಾಣೆ ಹೀಗೆ ಆಣೆಗಳು ಹೋಗಿ ಎಷ್ಟೋ ವರ್ಷಗಳಾದರೂ ಕೂಡ ಇವೊತ್ತಿಗೂ ಬರವನ್ನು ಅಣೆವಾರಿ ಲೆಕ್ಕಗಳಲ್ಲಿ ಅಸೆಸ್ ಮಾಡಲಾಗುತ್ತಿದೆ. ಇದನ್ನು ಯಾವ್ಯಾವ ಜಿಲ್ಲೆಯಲ್ಲಿ, ಯಾವ್ಯಾವ ತಾಲ್ಲೂಕಿನಲ್ಲಿ ಅಣೆವಾರು ಲೆಕ್ಕದಲ್ಲಿ ಮಾಡಲಾಗುತ್ತಿದೆ ಎನ್ನುವ ಬಗ್ಗೆ ಅಣೆವಾರು ಮಾಹಿತಿ ನಿಮ್ಮಲ್ಲಿ ಇದೆಯೇ? ಈ ಮಾಹಿತಿ ನಿಮ್ಮಲ್ಲಿ ಇದೆಯೋ ಅಥವಾ ರೆವಿನ್ಯೂ ಮಿನಿಸ್ಟರ್‌ರವರಲ್ಲಿ ಇದೆಯೋ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆ ಮಾಹಿತಿಯಂತೂ ಸರ್ಕಾರದಲ್ಲಿ ಇದ್ದೇ ಇರುತ್ತದೆ. ಇದರ ಬಗ್ಗೆ ಹೇಳಬೇಕು. ಇನ್ನು ಬರ ಪರಿಹಾರಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿ ಕೊಂಡಿದ್ದೀರಿ ಎಂಬ ಬಗ್ಗೆ ಕೆಲಸವನ್ನು ಮಾತ್ರ ಹೇಳಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಇನ್ನೂ ಬರ ಎಂದು ಡಿಕ್ಲೇರ್ ಆಗಿಯೇ ಇಲ್ಲ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ಇನ್ನೂ ಡಿಕ್ಲೇರ್ ಆಗಿಲ್ಲ ಎಂದರೆ, ಎಲ್ಲರೂ ಸತ್ತು ಹೋದ ಮೇಲೆ ನೀವು ಬರ ಎಂದು ಡಿಕ್ಲೇರ್ ಮಾಡಲು ಯೋಚನೆ ಮಾಡಿ.

ಅಧ್ಯಕ್ಷರು:- ಮಾನ್ಯ ಶ್ರೀನಿವಾಸಗೌಡರೆ, ಬರದ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ಈ ಸಭೆಗೆ ಬಂದಾಗ ಕೇಳಿ.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ:- ನಾನು ಅಗ್ರಿಕಲ್ಚರ್ ಮೇಲೆ ಮಾತನಾಡುತ್ತೇನೆ. ಬರ ಎಂದಾಗ ಬಿತ್ತನೆ ಬೀಜದ ವಿಷಯವೂ ಬರುತ್ತದೆ. ಈಗಾಗಲೇ ರೈತರು ಭಿತ್ತನೆ ಮಾಡಿಬಿಟ್ಟಿದ್ದಾರೆ; ಈಗ ಮತ್ತೆ ಉಳುಮೆ ಮಾಡಬೇಕು, ಅದಕ್ಕೆ ಗೊಬ್ಬರ ಹಾಕಬೇಕು. ರೈತರ ಸಮಸ್ಯೆ ಯಾವಾಗ ಬಗೆಹರಿಯುವುದು? ನಾನು ಹೇಳುತ್ತಿರುವುದು ಇದೇ ವಿಚಾರವನ್ನು ಮಾನ್ಯ ಅಧ್ಯಕ್ಷರೆ, ಈಗ ಧಾರವಾಡ ಜಿಲ್ಲೆಯಲ್ಲಿ ಬಿತ್ತನೆ ಆಗಿದೆ. ಈಗ ಮಳೆ ಇಲ್ಲದೇ ಇರುವುದರಿಂದ ಅವೆಲ್ಲಾ ಒಣಗಿ ಹೋಗಿವೆ, ಈಗ ಮಳೆ ಬಂದರೆ ಮತ್ತೆ ಉಳುಮೆ ಮಾಡಿ ಬಿತ್ತನೆ ಮಾಡಬೇಕು. ಇದಕ್ಕೆ ಎಷ್ಟೆಷ್ಟು ಗೊಬ್ಬರ ಬೇಕು? ಎಷ್ಟೆಷ್ಟು ಬೀಜ ಬೇಕು? ಇದಕ್ಕೆ ಏನಾದರೂ ಕ್ರಮವನ್ನು ನೀವು ಜರುಗಿಸಿದ್ದೀರಾ? ಯಾವ್ಯಾವ ಜಿಲ್ಲೆಗೆ ಬೀಜ ಎಷ್ಟು ಬೇಕು? ಗೊಬ್ಬರ ಎಷ್ಟು ಬೇಕು? ಎಲ್ಲೆಲ್ಲಿ ಎಷ್ಟೆಷ್ಟು ಲಾಸ್ ಆಗಿದೆ? ಇದಕ್ಕೆ ಏನಾದರೂ ಇನ್‌ಶ್ಯೂರೆನ್ಸ್ ಕವರ್ ಆಗಿದೆಯೇ

ಎಂಬ ಬಗ್ಗೆ ಕ್ರಮವನ್ನು ತೆಗೆದುಕೊಂಡಿದ್ದೀರಿ? ಇದು ಬಹಳ ಮುಖ್ಯವಾದಂಥ ಕೆಲವಾದ್ದರಿಂದ ಇದರ ಬಗ್ಗೆ ತಾವೇನಾದರೂ ಕ್ರಮ ತೆಗೆದುಕೊಂಡಿದ್ದೀರಾ? ಇನ್ನು ವಾಟರ್ ಮ್ಯಾನೇಜ್‌ಮೆಂಟ್ ಬಗ್ಗೆ ಮಾನ್ಯ ಹನುಮೇಗೌಡರು ಬಹಳ ಚೆನ್ನಾಗಿ ಹೇಳಿದ್ದಾರೆ. ಈ ಬರ ಪರಿಹಾರಕ್ಕೆ ಆವರ್ತ ನಿಧಿಯನ್ನು ಈಗಾಗಲೇ ತಾವೇನು ಇಟ್ಟಿದ್ದೀರಿ ಅದನ್ನು ಈ ಬರ ಪರಿಹಾರಕ್ಕಾಗಿ ಶಾಶ್ವತವಾಗಿ ಆವರ್ತ ನಿಧಿಯನ್ನು ತಾವು ಇಡಬೇಕು. ರಾಜ್ಯದಲ್ಲಿ ಪ್ರತಿ ವರ್ಷ ಒಂದಲ್ಲ ಒಂದು ಭಾಗದಲ್ಲಿ ಬರ ಬರುತ್ತಿರುತ್ತದೆಯಲ್ಲದೇ ಕೋಲಾರ ಜಿಲ್ಲೆ, ಗುಲ್ಬರ್ಗಾ ಜಿಲ್ಲೆ, ಚಿತ್ರದುರ್ಗ ಜಿಲ್ಲೆಗಳಲ್ಲಿ ಬರ ಶಾಶ್ವತವಾಗಿ ಇದ್ದೇ ಇದೆ. ನಮ್ಮಲ್ಲಿ ಬರ ಎಂದು ಹೇಳಿದರೆ ರೈತ ಅಷ್ಟು ಯೋಚನೆಯನ್ನೇ ಮಾಡುವುದಿಲ್ಲ.ಹೋದ ವರ್ಷದಲ್ಲಿ ಧಾರವಾಡದಲ್ಲಿ ಬರದಿಂದ ಉಂಟಾದ ಕಷ್ಟವನ್ನು ತಾವೆಲ್ಲಾ ನೋಡಿದ್ದೀರಲ್ಲಾ. ಇಂಥಾದ್ದಕ್ಕೆ ಏನಾದರೂ ಚಿಂತನೆಯನ್ನು ಸರ್ಕಾರ ಮಾಡಿದೆಯೇ/ ಇದು ನಾಲ್ಕನೆಯದು. ಇನ್ನು ಮಾನ್ಯ ಬೈರೇಗೌಡರು ಕೂಡ ಹೇಳಿದ ಹಾಗೆ ಇಂದು ಪಿ.ಎಲ್.ಡಿ. ಬ್ಯಾಂಕ್‌ನಲ್ಲಿ ಕೇವಲ ಸಾಲ ವಸೂಲಿ ಮಾಡುವ ಕೆಲಸವಾಗುತ್ತಿದೆಯೇ ಹೊರತು ಸಾಲವನ್ನು ಕೊಡುವಂತಹ ಪರಿಸ್ಥಿತಿಯಂತೂ ಇಲ್ಲವಾಗಿದೆ. ಡಿ.ಸಿ.ಸಿ ಬ್ಯಾಂಕ್‌ಗಳಲ್ಲಿ ನಾರ್ತ್ ಕೆನರಾ, ಸೌತ್‌ಕೆನರಾ, ಕೂರ್ಗ್ ಮತ್ತು ಸ್ವಲ್ಪ ಮಟ್ಟಿಗೆ ಬೆಳಗಾಂ ಬಿಜಾಪುರದವುಗಳನ್ನು ಬಿಟ್ಟರೆ ಬೇರೆ ಯಾವ ಡಿ.ಸಿ.ಸಿ ಬ್ಯಾಂಕ್‌ಗಳೂ ನಾವು ತಿಳಿದುಕೊಂಡಿರುವ ಹಾಗೆ ಬಹಳ ಸಮೃದ್ಧಿಯಾಗಿಲ್ಲ. ಇಂಥ ಪರಿಸ್ಥಿತಿಯಲ್ಲಿ ನೀವೇನಾದರೂ ಸ್ಪೆಶಲ್ ಡ್ರೈವ್ ಮಾಡಿ ಅವರಿಗೆ ಷರ್ಟ್ ಟರ್ಮ್, ಮಿಡಲ್ ಟರ್ಮ್ ಎಂದು ಹೇಳಿ ಸಾಲವನ್ನು ಕೊಡುವುದಕ್ಕೆ ಯೋಚನೆ ಮಾಡಿದ್ದೀರಾ ಇವುಗಳು ನೀವು ಮಾಡಬೇಕಾದ ಇವತ್ತಿ ಕಾರ್ಯಕ್ರಮಗಳಾಗಿವೆ.

ಅಧ್ಯಕ್ಷರೆ:- ಮಾನ್ಯ ಶ್ರೀ ಶ್ರೀನಿವಾಸಗೌಡರೆ, ನೀವು ಹನ್ನೆರಡು ಜನ ಆರಾರ ಕ್ಲಾರಿಫಿಕೇಶನ್ಸ್ ಕೇಳಿದರೆ ಹೇಗೆ?

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ನಾನು ಕ್ಲಾರಿಫಿಕೇಷನ್ ಕೇಳುವಂಥಾದ್ದು ಏಕೆಂದರೆ, ಈ ವ್ಯವಸಾಯ ಇಲಾಖೆಯಲ್ಲಿ ಒಬ್ಬಿ ಕಮೀಷನರ್ ಇದ್ದಾರೆ. ಇವರು ಪಿ.ಹೆಚ್.ಡಿ ಮಾಡಿ ಡಾಕ್ಟರೇಟ್ ತೆಗೆದುಕೊಂಡಿದ್ದಾರೆ. ಅವರನ್ನು ನಾನು ಒಬ್ಬ ಐ.ಎ.ಎಸ್. ಆಫೀಸರ್ ಎಂದು ನೋಡುವುದಿಲ್ಲ. ವ್ಯವಸಾಯ ಇಲಾಖೆಯ ಒಬ್ಬ ಅಧಿಕಾರಿಯಾಗಿಯೇ ನಾನು ಡಾ|| ಸುಬ್ರಮಣಿಯವರನ್ನು ನೋಡುತ್ತೇನೆ ಅವರೊಡನೆ ನೀವು ಕುಳಿತು ಚಿಂತನೆ ಮಾಡಬಹುದು. ಇಲ್ಲಿ ಬೇರೆ ಅಧಿಕಾರಿಶಾಹಿಗಳ ಚಿಂತನೆಯೇ ಬೇರೆಯಾಗಿರುತ್ತದೆ. ಅವರ ಚಿಂತನೆಯನ್ನು ನೀವು ಏನಾದರೂ ಅಳವಡಿಸಿಕೊಂಡಿದ್ದೀರಾ? ಅದರಲ್ಲೂ ಮುಖ್ಯವಾಗಿ ಲೋನ್ ಕೊಡುವಂತಹ ವಿಚಾರದಲ್ಲಿ ಯಾವ್ಯಾವ ಬ್ಯಾಂಕ್‌ಗಳು ವೈಯಾಬಿಲಿಟಿ ಇದೆ? ಯಾವುಯಾವುದು ಇಲ್ಲವೆಂಬುದನ್ನು ನೀವು ನೋಡಬೇಕಾಗುತ್ತದೆ. ನಾನು ರೇಷ್ಮೆ ವಿಚಾರವಾಗಿ ನಿನ್ನೆ ದಿವಸ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ.

ಅಧ್ಯಕ್ಷರೆ:- ಈಗ ನೀವು ಕೇಳಿರುವ ವಿಚಾರಕ್ಕೆ ಮಾನ್ಯ ಕೃಷಿ ಸಚಿವರು ಉತ್ತರ ಕೊಡಲಿ, ರೇಷ್ಮೆ ವಿಚಾರವಾಗಿ ಆಮೇಲೆ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಆಮೇಲೆ ಇದರ ಕ್ಲಾರಿಫಿಕೇಶನ್ ಕೇಳಿ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ಮಾನ್ಯ ಅಧ್ಯಕ್ಷರೇ, ಇದರ ಜೊತೆಗೆ ಕುಡಿಯುವ ನೀರಿನ ವಿಚಾರವೂ ಬರುತ್ತದೆ. ನಾನು ನನ್ನ ಕ್ಷೇತ್ರದಲ್ಲಿ ನಾಲ್ಕು ಬೋರ್‌ವೆಲ್‌ಗಳನ್ನು ಹಾಕಿಕೊಡಿ ಎಂದು ಸುಮಾರು ಮೂರು ತಿಂಗಳುಗಳಿಂದ ಕೇಳುತ್ತಿದ್ದೇನೆ, ಇವತ್ತಿನವರೆಗೂ ಒಂದು ಬೋರ್‌ವೆಲ್ ಅನ್ನು ಹಾಕಿಲ್ಲ. ನಾವು ಈ ವಿಚಾರವಾಗಿ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರನ್ನು ಕೇಳಿದರೆ, ಹಣವಿಲ್ಲವೆಂದು ಹೇಳುತ್ತಾರೆ, ಜಿಲ್ಲಾ ಪಂಚಾಯತ್ ಅಧ್ಯಕ್ಷರನ್ನು ಕೇಳಿದರೆ ಹಣವಿಲ್ಲವೆಂದು ಹೇಳುತ್ತಾರೆ. ಸಿಇಒರವರನ್ನು ಕೇಳಿದರೂ ಹಣವಿಲ್ಲವೆಂದು ಹೇಳುತ್ತಾರೆ. ಈ ರೀತಿ ಕುಡಿಯುವ ನೀರಿಗೂ ಈ ಪರಿಸ್ಥಿತಿಯಾದರೆ ನಮ್ಮ ಗತಿ ಏನು? ನಾವು ಹೇಗೆ ಹಳ್ಳಿಗಳಲ್ಲಿ ಜನರಿಗೆ ಮುಖವನ್ನು ತೋರಿಸುವುದು? ನಾನು ಬೇಕಾದರೆ ಈ ನಾಲ್ಕು ಹಳ್ಳಿಗಳ ಹೆಸರುಗಳನ್ನು ಹೇಳುತ್ತೇನೆ. ಕೆಲವು ಕಡೆಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಿದ್ದಾರೆ, ಅದಕ್ಕೆ ಮೋಟರ್‌ಗಳು, ಪೈಪ್‌ಗಳು, ಪಂಪ್‌ಗಳನ್ನು ಕೊಟ್ಟಿಲ್ಲ. ಇವತ್ತಿನ ದಿವಸ ಕುಡಿಯುವ ನೀರಿಗೆ ಸಮರೋಪಾದಿಯಲ್ಲಿ ಕಾರ್ಯಕ್ರಮಗಳನ್ನು ಮಾಡಬೇಕು. ಇಲ್ಲದಿದ್ದರೆ ಕಷ್ಟವಾಗುತ್ತದೆಂದು ಹೇಳುತ್ತೇನೆ. ಇನ್ನು ಬೆಳೆ ವಿಮೆಯ ಬಗ್ಗೆ ಹೇಳುವುದಾದರೆ.

ಅಧ್ಯಕ್ಷರು:- ನೀವು ಈ ರೀತಿ 8-10 ಕ್ಲಾರಿಫಿಕೇಷನ್ಸ್ ಕೇಳಿದರೆ ಹೇಗೆ? ನೀವು ಇಲ್ಲಿ ಕುಡಿಯುವ ನೀರಿಗೂ, ಕೃಷಿಗೂ ಏನು ಸಂಬಂಧವಿದೆ ಎಂದು ಕೇಳುತ್ತಿದ್ದೀರಿ? ಮಾನ್ಯ ಕೋಳಿವಾಡ್‌ವರೂ ಇದ್ದರೆ ಅವರಿಗೆ ಹೇಳಬೇಕು. ಈಗ ಅವರು ಆರ್‌ಡಿಪಿಆರ್ ಡಿಮ್ಯಾಡ್‌ಗಳನ್ನು ಮೂವ್ ಮಾಡಿದಾಗ ಅದನ್ನು ಕೇಳಿ, ಈ ಹಂತದಲ್ಲಿ ಅಲ್ಲ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ಮಾನ್ಯ ಅಧ್ಯಕ್ಷರೇ, ಆಯಿತು, ಈ ಬೆಳೆ ವಿಮೆಯ ಬಗ್ಗೆ ನನ್ನದು ಒಂದು ಸಲಹೆ ಇದೆ. ಇವತ್ತು ಇಫ್ಕೋದವರು, ಟೋಕಿಯೋ ಇನ್‌ಶ್ಯೂರೆನ್ಸ್ ಕಂಪನಿಯಿಂದ ಗೊಬ್ಬರ ಕೊಳ್ಳುವಂತಹ ಯಾವುದೇ ರೈತರಿಗೆ ಆಕ್ಸಿಡೆಂಟಲ್ ಇನ್‌ಶ್ಯೂರೆನ್ಸ್ ಅನ್ನು ಮಾಡಿ ಮಾನ್ಯ ಮುಖ್ಯಮಂತ್ರಿಯವರಿಂದ ಹೋದ ವರ್ಷ ಲಾಂಚ್ ಮಾಡಿಸಿದೆ. ನೀವು ಈ ವಿಮಾ ಕಂಪೆನಿಯವರೊಡನೆ ಮಾತನಾಡಿ ಯಾವ್ಯಾವ ಜಿಲ್ಲೆಗಳಲ್ಲಿ ಯಾವ್ಯಾವ ರೀತಿಯ ವಿಮೆ ಮಾಡಲು ಸಾಧ್ಯವೆಂಬುದನ್ನು ನೋಡಬೇಕು. ಇವತ್ತು ಎಲ್ಲವೂ ಸ್ಪರ್ಧಾತ್ಮಕವಾಗಿ ಇವೆ. ಇದನ್ನು ತಾವು ಉಪಯೋಗ ಮಾಡಿಕೊಳ್ಳಬೇಕು. ನಾನು ಅದಕ್ಕೆ ಡಾ॥ ಸುಬ್ರಮಣಿಯರನ್ನು ಒಳ್ಳೆಯ ಐಎಎಸ್ ಆಫೀಸರ್ ಎನ್ನುವುದಕ್ಕಿಂತ ಅಂತಹ ಒಳ್ಳೆಯ ಡಾಕ್ಟರೇಟ್ ಪದವಿ ಇರುವಂತಹ ಅಧಿಕಾರಿಗಳು ನಿಮ್ಮ ಹತ್ತಿರ ಇದ್ದಾರೆ. ಅವರನ್ನು ಉಪಯೋಗಿಸಿಕೊಂಡು ಇಲ್ಲಿ ಎಲ್ಲಾ ರೀತಿಯ ವಿಮೆಗಳನ್ನು ಕವರ್ ಮಾಡುವಂತಹ ಅವಕಾಶ ಇವತ್ತು ನಿಮಗೆ ಲಭಿಸುತ್ತಿದೆ. ಈ ರೀತಿಯಾಗಿ ಮೊದಲು ಬರುತ್ತಿರಲಿಲ್ಲ. ಇಲ್ಲಿ ವಿಮೆ ಕಂಪನಿಯವರು ಆಫೀಸ್‌ಗಳನ್ನು ಬಿಟ್ಟು ಹೊರಗಡೆ ಬರುತ್ತಿರಲಿಲ್ಲ. ಇವತ್ತು ನೀವು ಕರೆದರೆ ನಿಮ್ಮ ಬಾಗಿಲಿಗೆ ಬರುತ್ತಾರೆ. ಇದನ್ನು ಉಪಯೋಗ ಮಾಡುವುದಕ್ಕೆ ಯಾವ ರೀತಿ ಆದರೆ ಒಳ್ಳೆಯದೆಂಬ ಬಗ್ಗೆ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ.ಎಸ್. ಕೌಜಲಗಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಅವರು ಏನು ಸಲಹೆಗಳನ್ನು ಹೇಳಿದ್ದಾರೆ. ಅದೇ ರೀತಿಯಲ್ಲಿ ಇಲಾಖಾ ಮುಖ್ಯಸ್ಥರೊಡನೆ ಚರ್ಚೆ

ಮಾಡಿ ಆದಷ್ಟು ಬೇಗ ಜಾರಿಗೆ ತರುತ್ತೇನೆ, ಏಕೆಂದರೆ ಇನ್ನು 15ನೇ ತಾರೀಖಿನವರೆಗೆ ಮಳೆಗೆ ಅವಕಾಶ ಇದೆ. ಅದಕ್ಕಾಗಿ ನಾವು ದಾರಿಯನ್ನು ನೋಡುತ್ತಿದ್ದೇನೆ. ಉಳಿದುದ್ದಕ್ಕೆ ನಾವು ಎಲ್ಲಾ ತಯಾರಿ ಮಾಡಿಕೊಂಡು, ಮಳೆ ಬಾರದಿದ್ದರೆ ಏನು ಆಗಬಹುದು? ಏನು ಮಾಡಬಹುದು? ಎಂಬ ಬಗ್ಗೆ ನೋಡಿ ನಾವು ಮಾಡುತ್ತೇವೆ.

ಅಧ್ಯಕ್ಷರು:- ಮಾನ್ಯ ಹನುಮೇಗೌಡರು ಕೇಳಿದಂತಹ ಪ್ರಶ್ನೆಗೆ ಉತ್ತರ ಕೊಡಿ.

ಶ್ರೀ ಕೆ. ಹೆಚ್. ಹನುಮೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಕಾವೇರಿ ಜಲ ಭಾಗ್ಯ ನಿಗಮವನ್ನು ರಚನೆ ಮಾಡಬೇಕೆಂದು ಹೇಳಿರುವಂಥಾದ್ದು ಎರಡನೆಯದಾಗಿ, ಪ್ರತಿವರ್ಷ ಕ್ಷಾಮದ ದವಡೆಗೆ ಸಿಗುವಂತಹ ಜನರಿಗೆ ಮೋಕ್ಷ ಸಿಗುವ ರೀತಿಯಲ್ಲಿ ಅವರಿಗೆ ಏನಾದರೂ ಒಂದು ಶಾಶ್ವತವಾದಂತಹ ಪರಿಹಾರವನ್ನು ಒದಗಿಸಿಕೊಟ್ಟು, ಅವರು ಬೇರೆಯವರ ಹಾಗೆ ಒಳ್ಳೆಯ ರೀತಿಯಲ್ಲಿ ಬದುಕವಂಥಾದ್ದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಿ ಪುಣ್ಯ ಕಟ್ಟಿಕೊಳ್ಳಿ ಎಂದು ಹೇಳಿದ್ದೆ. ಈ ವಿಚಾರದ ಬಗ್ಗೆ ಮಾನ್ಯ ಮಂತ್ರಿಯವರು ಉತ್ತರ ಹೇಳಬೇಕು.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಮಾನ್ಯ ಅಧ್ಯಕ್ಷರೆ, ಬರದ ಬಗ್ಗೆ ಜಿಲ್ಲಾ ಮಂತ್ರಿಗಳು ಏನು ಮಾಡಿದ್ದಾರೆ? ಇಲ್ಲಿ ಬರ ಎಂದು ಮಂತ್ರಿಗಳನ್ನು ಏಕೆ ಕೇಳುತ್ತೀರಿ? ಜಿಲ್ಲಾ ಮಂತ್ರಿಗಳನ್ನು ಕೇಳಿ,

ಅಧ್ಯಕ್ಷರು:- ನಾವು ಸ್ಟೇಟ್ ಲೆವಲ್‌ನಲ್ಲಿ ಈ ವಿಚಾರವನ್ನು ಡಿಸ್ಕಸ್ ಮಾಡುತ್ತಿದ್ದೇವೆ. ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಮಾಡುತ್ತಿಲ್ಲ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:- ಮಾನ್ಯ ಅಧ್ಯಕ್ಷರೇ, ಈಗ ಷಾರ್ಟ್ ಟರ್ಮ್ ಕ್ರಾಪ್ ಎಂದು ಅನೌನ್ಸ್ ಮಾಡಬೇಕೆಂದು ಹೇಳಿ ಮಾನ್ಯ ಕೃಷಿ ಸಚಿವರು ಆಲೋಚನೆ ಮಾಡಿದ್ದಾರೆ, ಈಗ ಮುಂಗಾರು ವಿಫಲವಾಗಿರುವುದರಿಂದ ಇದನ್ನು ಮಾಡಬೇಕೆಂದು ಯೋಚನೆ ಮಾಡಿದ್ದಾರೆ. ಇದಕ್ಕೆ ಯಾವ್ಯಾವುದು ಷಾರ್ಟ್ ಟರ್ಮ್ ಕ್ರಾಪ್ಸ್ ಎಂಬುದನ್ನು ಅವರು ಹೇಳಬೇಕು; ಮತ್ತೆ ಆ ಬೀಜಕ್ಕೆ ಎಷ್ಟು ಪರ್ಸೆಂಟ್ ಸಹಾಯಧನವನ್ನು ಕೊಡುವುದಕ್ಕೆ ಸಾಧ್ಯವಿದೆ? ಏಕೆಂದರೆ ಈಗಾಗಲೇ ರೈತರು ಬೀಜ ಸೋಯಿಂಗ್ ಮಾಡಿದ್ದಾರೆ, ಮತ್ತೆ ರೈತರು ಬೀಜವನ್ನು ಖರೀದಿ ಮಾಡಿ ಬಿತ್ತನೆ ಮಾಡಲು ಅವರಲ್ಲಿ ಶಕ್ತಿ ಇಲ್ಲ. ಅದಕ್ಕೋಸ್ಕರ ತಾವು ಏನು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರೆಂಬುದನ್ನು ತಿಳಿಸಬೇಕು. ತಾವು ಇದಕ್ಕೆ ಯಾವ ಯಾವ ಬೆಳೆಗಳನ್ನು ಬೆಳೆಯಬಹುದೆಂಬ ಬಗ್ಗೆ ಅಂದಾಜು ಮಾಡುತ್ತೀರಿ, ಅದನ್ನು ಹೇಳಬೇಕು; ಇನ್ನು ಅಂತರ್ ಜಲದ ಬಗ್ಗೆ ಮಾನ್ಯ ಶ್ರೀನಿವಾಸಗೌಡರು ಹೇಳಿದ್ದಾರೆ. ಈ ಅಂತರ್ ಜಲವನ್ನು ಹೆಚ್ಚಿಸುವಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ಈಗ ಐಪಿ-ಸೆಟ್‌ಗಳು ಇರುವಂತಹ ಜಾಗದಲ್ಲಿ ಜಿಯಾಲಿಜಿಸ್ಟ್‌ಗಳನ್ನು ನೇಮಕ ಮಾಡಿ, ಬೋರ್‌ವೆಲ್‌ಗಳು, ಮತ್ತು ಕೊಳವೆ ಬಾವಿಗಳ ಸುತ್ತ 10-12 ಅಡಿಗಳಲ್ಲಿ ಪಿಟ್ಸ್ ಹೊರಡಿಸಿ ಕಂಕರ್ ತುಂಬಿಸಿ ವಾಟರ್ ಡೈವರ್ಟ್ ಮಾಡಿದರೆ ನೀರಿಗೆ ಅಡ್ಡಿಯಾಗುವುದಿಲ್ಲ. ಮತ್ತೆ ವಾಟರ್ ಸೋರ್ಸ್ ಸಿಗುವುದಕ್ಕೆ ಸಾಧ್ಯವಿದೆ. ಇಂತಹ ಯೋಜನೆಗಳ ಬಗ್ಗೆ ಇಲಾಖಾ ಆಯುಕ್ತರೊಡನೆ ಚರ್ಚೆ ಮಾಡಿ, ಈ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕಾಗುತ್ತದೆ.

ನಾವು ಶಾಶ್ವತವಾಗಿ ಬರವನ್ನೇ ಎದುರಿಸುವುದಕ್ಕೆ ಆಗುವುದಿಲ್ಲ. ಇವತ್ತಿನ ದಿವಸ ರಾಜ್ಯದ ಹಣಕಾಸಿನ ಪರಿಸ್ಥಿತಿ ಹದಗೆಟ್ಟಿದೆ ಎಂಬುದನ್ನು ನಾವೆಲ್ಲರೂ ಕಂಡುಕೊಂಡಿದ್ದೇವೆ. ಇದಕ್ಕೆ ಶಾಶ್ವತವಾದಂತಹ ಆಲೋಚನೆಯನ್ನು ನಾವು ಮಾಡಬೇಕಲ್ಲಾ, ತಾವು ಸಹ ಹಿರಿಯ ಮಂತ್ರಿಗಳಾಗಿದ್ದೀರಿ, ಇದನ್ನು ಮಾಡುವುದಕ್ಕೆ ಸಾಧ್ಯವಿದೆ. ತಾವು ಇದಕ್ಕೆ ಉತ್ತರವನ್ನು ಹೇಳುತ್ತೀರೆಂದು ನಾನು ಭಾವಿಸುತ್ತೇನೆ.

ಶ್ರೀ ವಿ.ಎಸ್. ಕೌಜಲಗಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ಸಲಹೆಯನ್ನು ಕೊಟ್ಟಿದ್ದಾರೆ ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಕಾವೇರಿ ಜಲಭಾಗ್ಯ ನಿಗಮದ ರಚನೆ ಬಗ್ಗೆ ಕೇಳಿದ್ದೆ. ಅದಕ್ಕೆ ಅವರು ಉತ್ತರ ಹೇಳಲಿಲ್ಲ.

ಅಧ್ಯಕ್ಷರು:- ಮಾನ್ಯ ಹನುಮೇಗೌಡರೇ, ತಾವು ಕೇಳಿರುವಂತಹ ವಿಚಾರ ಮಾನ್ಯ ಕೃಷಿ ಮಂತ್ರಿಗಳಿಗೆ ಸಂಬಂಧಪಟ್ಟಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ, ಕಾವೇರಿ ಜಲ ಭಾಗ್ಯ ನಿಗಮದ ವಿಚಾರವನ್ನು ಮಾನ್ಯ ಕೃಷಿ ಮಂತ್ರಿಗಳು ಹೇಗೆ ಹೇಳುತ್ತಾರೆ? It is a policy decision to be taken by the government. ತಮ್ಮ ಸಲಹೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿ ನಾವು ಚರ್ಚೆ ಮಾಡುತ್ತೇವೆ.

ಅಧ್ಯಕ್ಷರು:- ತಮ್ಮ ಸಲಹೆಯನ್ನು ಚರ್ಚೆ ಮಾಡುತ್ತೇವೆಂದು ಕಾನೂನು ಮಂತ್ರಿಯವರು ಹೇಳಿದ್ದಾರಲ್ಲಾ.

ಶ್ರೀ ಡಿ.ಬಿ. ಚಂದ್ರೇಗೌಡ:- ರಾಜ್ಯದ ಒಟ್ಟಾರೆ ಹಿತದೃಷ್ಟಿಯಿಂದ ಅವರ ಸಲಹೆ ಸೂಕ್ತವಾಗಿ ಇರಬಹುದು, ಇದನ್ನು ಮಾನ್ಯ ಕೃಷಿ ಮಂತ್ರಿಯವರನ್ನು ಉತ್ತರ ಹೇಳಿ ಎಂದರೆ ಹೇಗೆ? ಇದು ಸರ್ಕಾರ ತೆಗೆದುಕೊಳ್ಳಬೇಕಾದ ಪಾಲಿಸಿ ಡಿಸಿಷನ್ ಇದೆ.

ಶ್ರೀ ಕೆ.ಹೆಚ್. ಹನುಮೇಗೌಡ:- ಮಾನ್ಯ ಅಧ್ಯಕ್ಷರೆ, ಹೀಗೆ ಮುಂದೆ ಹಾಕಿ ಹಾಕಿ ದೇಶವನ್ನು ಹೇಗೆ ಹಾಳು ಮಾಡಿದ್ದೇವೆ ಎಂಬುದನ್ನು ಹೇಳುತ್ತೇನೆ. ಈ ಸ್ಥಿತಿಗೆ ಬಂದಿದೆ 1951ರಲ್ಲಿ ಶ್ರೀ ಕೃಷ್ಣಚ್ಚೇವ್ ಬುಲ್‌ಗ್ಯಾನಿನ್ ಬಂದಿದ್ದರು, ಆಗ ನಾನು ಲಾ ಕಾಲೇಜ್‌ನಲ್ಲಿ ಓದುತ್ತಾ ಇದ್ದೆ, ಅವರು ಭಾಷಣದಲ್ಲಿ ಒಂದು ವಿಚಾರ ಹೇಳಿದರು. ಈ ಸೆಂಟ್ರಲ್ ಗೌವರ್ನ್‌ಮೆಂಟ್‌ನವರು ಇಂಡಸ್ಟ್ರಿಯಲೈಜೇಷನ್ ಮಾಡುವುಕ್ಕೆ ಹೊರಟಿದ್ದಾರೆ. ಅದು ಸಾಧ್ಯವಾಗುವುದಿಲ್ಲವೆನ್ನುವಂತಹ ಮಾತನ್ನು ಹೇಳಿದರು. ಮತ್ತೆ ಇದನ್ನು ಕೇಂದ್ರ ಸರ್ಕಾರ ಅಥವಾ ಮಾನ್ಯ ಜವಾಹರಲಾಲ್ ನೆಹರುರವರು ಒಪ್ಪಿಕೊಳ್ಳಲಿ, ಗಂಗಾ ಮತ್ತು ಕಾವೇರಿ ನದಿಗಳ ಲಿಂಕ್ ಮಾಡುತ್ತೇವೆ. ಇದಕ್ಕೆ 1,500 ಕೋಟಿ ರೂಪಾಯಿಗಳು ಆಗುತ್ತವೆ. ಇದಕ್ಕೆ ಶೇಕಡಾ ಒಂದೇ ಒಂದು ಪರ್ಸೆಂಟ್ ಬಡ್ಡಿಯನ್ನು ಹಾಕುತ್ತೇವೆಂದು ಹೇಳಿದರು. ಅಲ್ಲದೇ ನಮ್ಮ ದೇಶದಲ್ಲಿ ಶೇಕಡಾ 80 ರಷ್ಟು ರೈತರು ಇರುವಂತಹದ್ದಾಗಿದೆ. ಈ ಎರಡು ನದಿಗಳು ಲಿಂಕ್ ಆದರೆ ನಿಮಗೆ ಶಾಶ್ವತವಾದಂತಹ ಪರಿಹಾರವಾಗುತ್ತದೆನ್ನುವ ಮಾತನ್ನು ಹೇಳಿದರು. ಇಲ್ಲಿ ಈಗ ಮಾನ್ಯ ಡಿ.ಬಿ. ಚಂದ್ರೇಗೌಡರು ಹೇಳಿದ ಹಾಗೆ ಆಗ ಅಯ್ಯಯೋ ಬೇಡ ಅಂದರು.

ಅಧ್ಯಕ್ಷರು: ಮಾನ್ಯ ಚಂದ್ರೇಗೌಡರು ಒಳ್ಳೆಯ ಸಲಹೆ ಎಂದು ಹೇಳಿದ್ದಾರಲ್ಲಾ..

ಶ್ರೀ ಕೆ.ಹೆಚ್. ಹನುಮೇಗೌಡ:- ಮಾನ್ಯ ಅಧ್ಯಕ್ಷರೇ, ರಾಜಕಾರಣಗಳು ಸರ್ಕಾರದಲ್ಲಿ ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳದೇ ದೇಶ ಹೇಗೆ ಹಾಳಾಯಿತು ಎಂಬುದಕ್ಕೆ ನಾನು ಇದನ್ನು ಉದಾಹರಣೆಯಾಗಿ ಹೇಳುತ್ತಿದ್ದೇನೆ. ತಾವು ಇಂತಹ ವಿಚಾರಗಳನ್ನು ಪೋಸ್ಟ್‌ಪೋನ್ ಮಾಡಬೇಡಿ; ಈ ಅಧಿಕಾರಿ ಶಾಶ್ವತವಾಗಿ ಇರುವುದಿಲ್ಲ. ಇದ್ದಾಗ ದೇಶ ನೆನೆಪು ಮಾಡಿಕೊಳ್ಳುವ ಹಾಗೆ, ಜನರು ನೆನೆಪು ಮಾಡಿಕೊಳ್ಳುವ ಹಾಗೆ, ಅವರಿಗೆ ಉಪಕಾರವಾಗುವ ಕೆಲಸಗಳನ್ನು ಮಾಡಿ, ಅವರ ಕೃಪೆಗೆ ಪಾತ್ರರಾಗಿ ಇಲ್ಲಿ ಸುಮ್ಮನೆ ಹೇಳಿಕೊಂಡು ಪೋಸ್ಟ್ ಪೋನ್ ಮಾಡಿಕೊಂಡು ಏಕೆ ಹೋಗುತ್ತೀರಾ? ನೀವು ಎಲ್ಲಾ ಮುಂದಿನ ಜನ್ಮದಲ್ಲಿ ಬರಗಾಲ ಪ್ರದೇಶದಲ್ಲಿ ಹುಟ್ಟಿತ್ತೀರಿ, ಈಗ ನೀವು ಇದನ್ನು ಸರಿ ಮಾಡಿದಿದ್ದರೆ ಹಾಗೆ ಆಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಹನುಮೇಗೌಡರ ಪ್ರಶ್ನೆಗೆ ಮಾನ್ಯ ಕೃಷಿ ಮಂತ್ರಿಯವರು ಉತ್ತರವನ್ನು ಹೇಳುವುದು ಕಷ್ಟವೆಂದು ಹೇಳಿದೆ, ಅದು ಪಾಲಿಸಿ ಮ್ಯಾಟರ್ ಎಂದು ಹೇಳುವುದು ಬೇಡವೇ? ಇಲ್ಲಿ ಅವರು ಹೇಳಿದ್ದೆಲ್ಲಾ ರೆಕಾರ್ಡ್‌ಗೆ ಹೋಗಬೇಕು. ನಾವು ಹೇಳುವುದು ಬೇಡವೇ?

ಅಧ್ಯಕ್ಷರು:- ಈಗ ಕೋಲಾರದಲ್ಲಿ ಹುಟ್ಟಲಿ, ಈಗಿನ ಕಾಲದಲ್ಲಿ ಮಲೆನಾಡಿಗಿಂತ ಕೋಲಾರದಲ್ಲಿ ಮಳೆ ಜಾಸ್ತಿ ಬೀಳುತ್ತಿದೆ ಸುಮ್ಮನಿರಿ

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೆ, ನಮ್ಮ ಊರಿನಲ್ಲಿ ಒಂದು ರಂಗಸ್ಥಳ ಇದೆ, ಅದನ್ನು ಖಾಲಿ ಬಿಡುವ ಹಾಗೆ ಇಲ್ಲ; ಅಲ್ಲಿ ಪೀಠಿಕೆ ಹಾಕಿದ ಮೇಲೆ ಏನಿಲ್ಲವೆಂದರೂ ಹಾಸ್ಯಗಾರನಾದರೂ ಬಂದು ಕುಣಿಯುತ್ತಲೇ ಇರಬೇಕು ಹಾಗೆ ಮಾನ್ಯ ಕಂದಾಯ ಮಂತ್ರಿಗಳು ಈ ಸದನಕ್ಕೆ ಬರುವವರೆಗೂ ಯಾರಾದರೂ ಸದನದಲ್ಲಿ ಕುಣಿಯಬೇಕಲ್ಲಾ, ಅದಕ್ಕೆ ಕುಣಿಯುತ್ತಿದ್ದಾರೆ.

ಶ್ರೀ ಎಂ.ಜಿ. ಮುಳೆ(ಬಸವಕಲ್ಯಾಣ):- ಮಾನ್ಯ ಅಧ್ಯಕ್ಷರೇ, ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಯವರು ಕೊಡುವಂತಹ ಬಾಕಿಯ ಬಗ್ಗೆ ಕೂಡ ಉತ್ತರ ಕೊಟ್ಟಿಲ್ಲ ಅದರ ಬಗ್ಗೆ ಕೂಡ ಹೇಳಬೇಕಾಗುತ್ತದೆ.

ಅಧ್ಯಕ್ಷರು:- ಅದನ್ನು ಹೇಳುತ್ತಾರೆ.

ಶ್ರೀ ಕೆ.ಬಿ ಮಲ್ಲಿಕಾರ್ಜುನ:- ಮಾನ್ಯ ಅಧ್ಯಕ್ಷರೇ, ನಾವು ಇಲ್ಲಿಯವರೆಗೆ ಏನು ತಿಳಿದುಕೊಂಡಿದ್ದೆವು ಎಂದರೆ, ಏನು ಕೋಲಾರದಲ್ಲಿ ಚಿನ್ನದ ಗಣಿಯಲ್ಲಿ ಹುಟ್ಟಿದ್ದೀರಿ? ಎಂದು ನಮ್ಮ ಜನರು ಕೇಳುತ್ತಿದ್ದರು. ಇವತ್ತು ಕೋಲಾರ ಜಿಲ್ಲೆಯಲ್ಲಿ ಹುಟ್ಟಿರುವವರು ಪಾಪ ಮಾಡಿದ್ದಾರೆಂಬುದು ನಮ್ಮ ಮಾನ್ಯ ಹನುಮೇಗೌಡರ ಭಾಷಣವನ್ನು ಕೇಳಿದ ಮೇಲೆ ಗೊತ್ತಾಯಿತು. ಈಗ ನಮ್ಮ ಕಡೆಯ ಈ ಗಾದೆಯನ್ನು ಬದಲಾವಣೆ ಮಾಡಬೇಕಾಗುತ್ತದೆ.

ಶ್ರೀ ಕೆ.ಹೆಚ್. ಹನುಮೇಗೌಡ:- ನೀವು ಮತ್ತು ಮಾನ್ಯ ಭೈರೇಗೌಡರು, ಇಂಥವರು ಒಂದು ಇಪ್ಪತ್ತು ಜನರು ಇದ್ದೀರಿ, ನಿಮ್ಮನ್ನು ಕೋಲಾರದವರು ಎಂದು ಹೇಳುವುದಕ್ಕಾಗುವುದಿಲ್ಲ,

ನಾನು ಹಳ್ಳಿಗಳಲ್ಲಿ ಬಡಪಾಯಿಗಳು ಇದ್ದಾರಲ್ಲಾ ಅವರನ್ನು ನೋಡಿ ಹೇಳಿದ್ದು, ಇವರು ನಮ್ಮ ಕಣ್ಣ ಮುಂದೆ ಕುಳಿತ್ತಿದ್ದಾರೆ, ಇವರು ಹೊಲಕ್ಕೆ ಹೋಗುತ್ತಾರಾ, ಹೊಲವನ್ನು ನೋಡಿದ್ದಾರಾ? ಆ ಕಾಲ ಹೋಯಿತು. ಈಗ ನೀವು ಮೇಲೆ ಬಂದಿದ್ದೀರಿ, ನಾನು ಹೇಳಿದ್ದು, ಆ ಬಡಾಪಾಯಿಗಳನ್ನು ಜ್ಞಾಪಿಸಿಕೊಂಡು ಹೇಳಿದೆ. ಇಲ್ಲ, ಅಂದರೆ ಥಾರ್ ಮರುಭೂಮಿ ಎಂದು ಹೇಳಲಾ? ಅಲ್ಲಿ ಹುಟ್ಟುತ್ತಾರೆ, ಇವರೆಲ್ಲಾ, ಹೋಗಲಿ ಕೋಲಾರ ಎಂದು ಹೇಳಿದ್ದನ್ನು ವಾಪಸ್ಸು ತೆಗೆದುಕೊಂಡಿದ್ದೇವೆ. ಇವರು ಅಧಿಕಾರವನ್ನು ಸರಿಯಾಗಿ ನಡೆಸದೇ ಇದ್ದರೆ ಇವರೆಲ್ಲಾ ಥಾರ್ ಮರುಭೂಮಿಯಲ್ಲಿ ಹುಟ್ಟುತ್ತಾರೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ದಿವಸ ಮಾತನಾಡುವಾಗ ಒಂದು ಪ್ರಶ್ನೆಯನ್ನು ಕೇಳಿದ್ದೆ, ತಾವು ಸದನಕ್ಕೆ ಮಾನ್ಯ ಕಂದಾಯ ಸಚಿವರು ಬಂದಾಗ ನನಗೆ ಕೇಳಲು ಅವಕಾಶವನ್ನು ಕೊಡಬೇಕು. ಆ ಪ್ರಶ್ನೆಯನ್ನು ಈಗ ನಾನು ಕೇಳುವುದಿಲ್ಲ. ಈಗ ಮಾನ್ಯ ಕೃಷಿ ಸಚಿವರಲ್ಲಿ ಕೇಳುವುದೇನೆಂದರೆ ಶಾರ್ಟ್ ಟರ್ಮ್ ಕ್ರಾಪ್ ಸೀಡ್ಸ್ ಅನ್ನು ಸಪ್ಲೈ ಮಾಡುತ್ತಿರಾ, ಎಂಬ ಪ್ರಶ್ನೆಯನ್ನು ಕೇಳಿದ್ದೆ.

4.40 ಪಿ.ಎಂ

ಹಿಂದೆ ಏನೇನು ಯಾವ್ಯಾವ ಬೀಜಗಳ ಸ್ಟಾಕ್ ಮಾಡಿದ್ದೇವೆ ಎನ್ನುವ ಉತ್ತರವನ್ನು ಹೇಳಿದರೇ ಹೊರತುಈಗ ಹೊಸದಾಗಿ ಯಾವ ಬೀಜಗಳನ್ನು ಕೊಡುತ್ತೇವೆ. ಸಬ್ಸಿಡಿ ಎಷ್ಟು ಕೊಡುತ್ತೇವೆ ಎನ್ನುವ ಮಾಹಿತಿಯನ್ನು ರೈತರಿಗೆ ಅವರು ಕೊಡಲಿಲ್ಲ, ದಯಮಾಡಿ ಆ ಮಾಹಿತಿಯನ್ನು ಕೊಡಬೇಕು. ಈಗ ಬೀಜ ಹಾಗೂ ಗೊಬ್ಬರವನ್ನು ಹಾಕಲು ರೈತರಲ್ಲಿ ಹಣವಿಲ್ಲ. ಈ ಬೀಜ ಹಾಗೂ ಗೊಬ್ಬರವನ್ನು ವಿಎಸ್ಎಸ್ಎನ್ ಮೂಲಕ ಬಿಡುಗಡೆ ಮಾಡುತ್ತಿದ್ದಾರೆ, ಪಟ್ಟಾ ಪುಸ್ತಕವನ್ನು ಆಧಾರವಾಗಿಟ್ಟುಕೊಂಡು ರೈತರಿಗೆ ಬೀಜ ಮತ್ತು ಗೊಬ್ಬರವನ್ನು ಕೊಟ್ಟರೆ ರೈತರು ಕೃಷಿ ಮಾಡಲು ಅನುಕೂಲವಾಗುತ್ತದೆ. ಇದನ್ನು ಉಚಿತವಾಗಿ ಕೊಡಬೇಕು, ಇಲ್ಲವಾದರೆ ಶೇಕಡ 50 ರಷ್ಟು ಸಬ್ಸಿಸಿಡಿ ಮೂಲಕ ಉಳಿದ ಶೇಕಡ 50 ರಷ್ಟು ಸಾಲದ ರೂಪದಲ್ಲಿ ಕೊಡಬೇಕು, ಹಣವನ್ನು ಕ್ರಾಪ್ಸ್ ಬರುತ್ತಿದ್ದಂತೆ ವಿಎಸ್ಎಸ್ಎನ್‌ರವರಿಗೆ ಕಟ್ಟುತ್ತಾರೆ. ಈ ಬಗ್ಗೆ ಸಹಕಾರ ಸಚಿವರ ಹತ್ತಿರ ಅಲೋಚನೆ ಮಾಡಿ ಈ ಕಾರ್ಯಕ್ರಮವನ್ನು ಜಾರಿಗೆ ತರಲು ಸಾಧ್ಯವೆ? ಹಾಗೆ ಜಾರಿಗೆ ತಂದರೆ ರೈತರಿಗೆ ಅನುಕೂಲವಾಗುತ್ತದೆ. ಈ ಬಗ್ಗೆ ನಿನ್ನೆಯೂ ಸಹ ನಾನು ಕೇಳಿದ್ದೆ, ಉತ್ತರ ಬರಲಿಲ್ಲ ಇದಾಗದಿದ್ದರೆ ರೈತರರಲ್ಲಿ ಹಣವಿಲ್ಲ, ಮುಂದೆ ಅವರು ಯಾವುದೇ ಬೆಳೆ ಬೆಳೆಯಲಾಗುವುದಿಲ್ಲ. ದಯಮಾಡಿ ಈ ಬಗ್ಗೆ ತಾವು ಚಿಂತನೆ ಮಾಡಿ. ಇವತ್ತು ಯಾರೋ ಹೇಳುತ್ತಿದ್ದರು, ಕೃಷಿ ಸಚಿವರು ಮಾತನಾಡುವುದಕ್ಕೆ ನಿಲುತ್ತಿದ್ದಂತೆ ಹೊರಗಡೆ ಮಳೆ ಬಂದಿತು ಎಂದು; ಇನ್ನು ನಾಳೆ ನಾಡಿದ್ದು ಮಳೆ ಬಂದರೆ ನಾವು ನಮ್ಮ ಕ್ಷೇತ್ರಕ್ಕೆ ಹೋಗಿ ಈ ರೀತಿ ಸರ್ಕಾರದ ಕೆಲವು ಕಾರ್ಯಕ್ರಮಗಳಿವೆ ಉಪಯೋಗಿಸಿಕೊಳ್ಳಿ ಎಂದು ರೈತರಿಗೆ ಹೇಳುತ್ತೇವೆ. ದಯಮಾಡಿ ಈ ಬಗ್ಗೆ ಇವತ್ತು ಮಂತ್ರಿಗಳು ಸ್ಪಷ್ಟವಾದ ಉತ್ತರವನ್ನು ಹೇಳಬೇಕು.

ಶ್ರೀ ಎ.ಎಸ್. ಕೌಜಲಗಿ(ಕೃಷಿ ಸಚಿವರು):- ಈ ಬಗ್ಗೆ ನಾನು ಸಹಕಾರ ಸಚಿವರೊಡನೆ ಮಾತನಾಡಿ ಯಾವರೀತಿ ಮಾಡಬೇಕೆನ್ನುವುದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಇವತ್ತು ಇವರ ಹತ್ತಿರ ಯಾವ್ಯಾವ ಬೀಜಗಳಿವೆ ಎನ್ನುವ ಮಾಹಿತಿ ಬೇಕು; ಸಬ್ಸಿಡಿ ಹಾಗೂ ಸಾಲ ಕೊಡುವ ಬಗ್ಗೆ ನಾಳೆ ಬೇಕಾದರೆ ಹೇಳಿ, ಇವತ್ತು ಶಾರ್ಟ್ ಟರ್ಮ್ ಕ್ರಾಪ್ಸ್‌ಗಳು ಯಾವುವು ಇವೆ, ನಾಳೆ ದಿವಸ ಇಂತಿಂಥ ಬೀಜಗಳಿವೆ ಎನ್ನುವುದನ್ನು ಪ್ರಕಟಣೆ ಮಾಡಬೇಕಾಗುತ್ತದೆ. ಇದು ಕೃಷಿ ಇಲಾಖೆಗೆ ನೇರವಾಗಿ ಸಂಬಂಧಿಸಿದ ವಿಷಯವಾಗಿದೆ. ಇದನ್ನು ಮಾಡದಿದ್ದರೆ ನಮ್ಮ ಚರ್ಚೆಯೆಲ್ಲಾ ವ್ಯರ್ಥವಾಗುತ್ತದೆ.

ಶ್ರೀ ವಿ.ಎಸ್. ಕೌಜಲಗಿ:- ನಾನು ಸಹಕಾರ ಸಚಿವರೊಡನೆ ಚರ್ಚೆ ಮಾಡಿ ಹೇಳುತ್ತೇನೆಂದು ಈಗಾಗಲೇ ಹೇಳಿದ್ದೇನೆ.

ಅಧ್ಯಕ್ಷರು:- ಅದಕ್ಕೆ ನಾಳೆ ಉತ್ತರ ಹೇಳುತ್ತಾರೆ; ರೇಷ್ಮೆ ಸಚಿವರಾದ ಮಾನ್ಯ ರೇವಣ್ಣನವರೆ, ಅನೇಕ ಮಾನ್ಯ ಸದಸ್ಯರುಗಳು ಈ ರೇಷ್ಮೆ ಬೆಳೆ ಬಗ್ಗೆ ತಮ್ಮ ತಮ್ಮ ಕಷ್ಟಗಳನ್ನು ಹೇಳಿದ್ದಾರೆ, ದಯವಿಟ್ಟು ಅದಕ್ಕೆ ಉತ್ತರ ಹೇಳಿ.

(ಈ) ರಾಜ್ಯದ ರೇಷ್ಮೆ ಬೆಳೆ ಹಾಗೂ ಉದ್ಯಮದ ಕುರಿತು ಮಾನ್ಯ ರೇಷ್ಮೆ ಸಚಿವರಿಂದ ಉತ್ತರ

ಶ್ರೀ ಹೆಚ್.ಎಂ. ರೇವಣ(ರೇಷ್ಮೆ ಸಚಿವರು):- ಮಾನ್ಯ ಸಭಾಧ್ಯಕ್ಷರೆ, ನಿನ್ನೆ ಕರ್ನಾಟಕ ರಾಜ್ಯದಲ್ಲಿ ರೈತರ ಪರಿಸ್ಥಿತಿಯ ಬಗ್ಗೆ ಮಾತನಾಡುತ್ತಾ ಮಾನ್ಯ ಕೆ. ಶ್ರೀನಿವಾಸಗೌಡರು ಹಾಗೂ ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಮತ್ತು ಮಾನ್ಯ ಹೆಚ್.ಎಸ್. ಮಹಾದೇವ ಪ್ರಸಾದ್‌ರವರು ಈ ರಾಜ್ಯದಲ್ಲಿ ರೇಷ್ಮೆ ಉದ್ಯಮದಲ್ಲಿರುವ ರೇಷ್ಮೆ ಬೆಳೆಗಾರರು, ರೀಲರ್ಸ್, ಟ್ವಿಸ್ಟರ್ಸ್ ವಿವಿಧ ಹಂತದಲ್ಲಿರುವ ಕೆಲಸಗಾರರು ಪಡುತ್ತಿರುವ ಸಂಕಷ್ಟದ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಈ ವಿಷಯದಲ್ಲಿ ಕರ್ನಾಟಕ ರಾಜ್ಯ ರೇಷ್ಮೆ ಬೆಳೆ ಹಾಗೂ ಉದ್ಯಮದಲ್ಲಿ ಮೈಸೂರು ರೇಷ್ಮೆ ಉದ್ಯಮ ಪ್ರಪಂಚದಲ್ಲೇ ಹೆಸರು ಪಡೆದಂಥ ಒಂದು ಉದ್ಯಮ, ಎಲ್ಲರ ಗಮನವನ್ನು ಸೆಳೆದಿದೆ. ಇವತ್ತು ಕೇಂದ್ರದ ಆಮದು ನೀತಿಯಿಂದಾಗಿ ಮುಕ್ತ ಆಮದು ನೀತಿಯ ಅಡಿಯಲ್ಲಿ ಚೈನಾ ದೇಶದ ರೇಷ್ಮೆ ಇವತ್ತು ನಮ್ಮ ದೇಶ ಹಾಗೂ ರಾಷ್ಟ್ರಕ್ಕೆ ಬರುತ್ತಿರುವ ಸಂದರ್ಭದಲ್ಲಿ, ಅದಲ್ಲದೆ ಕಳ್ಳತನದಲ್ಲಿ ನೇಪಾಳ ಹಾಗೂ ಬಾಂಗ್ಲಾ ದೇಶಗಳಿಂದ ಬರುತ್ತಿರುವ ವಿಷಯ ಕೂಡ ಚರ್ಚೆಯಾಗಿದೆ. ನಾನು ಕೂಡ ಕೋಲಾರದ ರೇಷ್ಮೆ ಬೆಳೆಗಾರರನ್ನು ಭೇಟಿ ಮಾಡಿ ಬಂದಿದ್ದೇನೆ. ನಾನೂ ಕೂಡ ರೇಷ್ಮೆ ಬೆಳೆಗಾರರ ಭಾಗದಿಂದ ಬಂದಿರುವ ವ್ಯಕ್ತಿ, ಇವತ್ತು ರೇಷ್ಮೆ ಉದ್ಯಮದಲ್ಲಿರುವವನು, ಆ ಉದ್ಯಮದಿಂದ ಬೇರೆ ಉದ್ಯಮದೆಡೆಗೆ ವರ್ಗಾವಣೆಯಾಗುವಂಥ ಸ್ಥಿತಿ ಇವತ್ತು ಉದ್ಭವಾಗಿದೆ. ಇದಕ್ಕೆ ಮುಖ್ಯ ಕಾರಣವೆಂದರೆ, ಕೇಂದ್ರ ಸರ್ಕಾರದ ಆಮದು ನೀತಿ ಇದರಡಿಯಲ್ಲಿ ಕಳೆದ ಸಾರಿ ಮಾನ್ಯ ಶ್ರೀನಿವಾಸಗೌಡರು ಕೊಟ್ಟಂಥ ಅಂಕಿಅಂಶಗಳ ಪ್ರಕಾರ, ಹಿಂದೆ 2000 ಟನ್ ಬರುತ್ತಿದ್ದಂಥ ರೇಷ್ಮೆ ಈ ಸಾರಿ 6000 ಟನ್ ರೇಷ್ಮೆ ಇವತ್ತು ವಿದೇಶದಿಂದ ಆಮದಾಗುತ್ತಿದೆ. ಇದೂ ಕೂಡ ರೇಷ್ಮೆ ಬೆಲೆ ಕುಸಿತಕ್ಕೆ ಕಾರಣ. ಇದರ ಜೊತೆಗೆ ಕಳೆದ ಸಾರಿ ಚೈನಾ ರೇಷ್ಮೆಗೆ 24 ಡಾಲರ್ ಬೆಲೆ ಇದ್ದುದ್ದು ಪ್ರಸ್ತುತ ವರ್ಷ 13-14 ಡಾಲರ್‌ಗೆ ಇಳಿದಿರುವುದು ಮತ್ತೊಂದು ಅಂಶ. ಇದರ ಜೊತೆಗೆ ಒಜಿಎಲ್ ಆಧಾರದ ರೇಷ್ಮೆ ಆಮದಾಗುತ್ತಿದ್ದು, ರಫ್ತು ಮತ್ತು ಆಮದು ನಡುವಿನ ವ್ಯತ್ಯಾಸ ಕೂಡ ಇವತ್ತಿನ ಪರಿಸ್ಥಿತಿಗೆ ಕಾರಣವಾಗಿದೆ. ಈ ವಿಷಯ ಕುರಿತು ಕೇಂದ್ರ ಸಚಿವರೊಡನೆ